ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

26 ಜುಲೈ, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 135 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಹರಾರೆಯಲ್ಲಿ ಶನಿವಾರ ಜಿಂಬಾಬ್ವೆ ವಿರುದ್ಧ ನಡೆದ 2ನೇ ಟಿ-20 ಪಂದ್ಯದಲ್ಲಿ ಅಜೇಯ ಅರ್ಧ ಶತಕ (60 ರನ್) ಗಳಿಸಿದ ಭಾರತದ ತಿಲಕ್ ವರ್ಮ ಸಂಭ್ರಮಿಸಿದ ಕ್ಷಣ..






ಎಸ್.ಜಾನಕಿಗೆ ಯಾಕೆ ಕೇವಲ ಪದ್ಮ? » 2



ಚನ್ನಮ್ಮ ನಿಧನಕ್ಕೆ ಸಕಲೇಶಪುರದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ » 3



ಕಾವೇರಿ: ಚರ್ಚೆಯಲ್ಲಿ ಭಾಗವಹಿಸದಂತೆ ಒತ್ತಾಯ » 4


# ಧರ್ಮೇಂದ್ರ ಪ್ರಧಾನ್ ರಾಜೀನಾಮೆ

## ಬೇಡಿಕೆ ಈಡೇರಿಸಲು ಒಪ್ಪಿದ ಕೇಂದ್ರ | ರಾಷ್ಟ್ರವ್ಯಾಪಿ ಸಿಜೆಪಿ ಪ್ರತಿಭಟನೆ ವಾಪಾಸ್

• ಪ್ರಜೋದಯ ವರದಿ

**ನವದೆಹಲಿ:** ದೇಶಾದ್ಯಂತ ವಿವಾದದ ಅಲೆ ಎಬ್ಬಿಸಿದ್ದ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಹಿನ್ನಲೆ ಕೊನೆಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ತಲೆದಂಡವಾಗಿದೆ. ಅದರ ಬೆನ್ನಲ್ಲೇ ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ಹಿಂಪಡೆಯುತ್ತಿರುವುದಾಗಿ ಸಿಜೆಪಿ ಘೋಷಿಸಿದೆ.

ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಹಾಗು ಪ್ರತಿಪಕ್ಷಗಳು ಸೇರಿ ಶಿಕ್ಷಣ ವಲಯದಲ್ಲಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂಬ ಒತ್ತಡ ಹೆಚ್ಚಾಗಿದ್ದರಿಂದ ಧರ್ಮೇಂದ್ರ ಪ್ರಧಾನ್ ಅವರು ತಮ್ಮ ಸ್ಥಾನಕ್ಕೆ ಶನಿವಾರ ರಾಜೀನಾಮೆ ನೀಡಿದ್ದಾರೆ. ಪ್ರಧಾನಿ ನರೇಂದ್ರಮೋದಿ ಅವರಿಗೆ ಒಂದು ಪುಟದ ಪತ್ರ ಬರೆದಿರುವ ಸಚಿವರು, ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ತಕ್ಷಣವೇ ಅಂಗೀಕರಿಸಬೇಕೆಂದು ಮನವಿ ಮಾಡಿದ್ದಾರೆ.

ಕಳೆದ ಹಲವು ದಿನಗಳಿಂದ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಯಿಂದಾಗಿ ನನ್ನ ಮನಸ್ಸಿಗೆ ನೋವಾಗಿದೆ. ವಿದ್ಯಾರ್ಥಿ ಚಳವಳಿಯಿಂದ ಬಂದ ನಾನು ಅವರ ಭಾವನೆಗಳಿಗೆ ಧಕ್ಕೆ ತರಲಾರೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲಾರೆ. ಯಾವಾಗಲೂ ವಿದ್ಯಾರ್ಥಿಗಳ ಪರವಾಗಿಯೇ ನಿಲ್ಲುತ್ತೇನೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಹೊಣೆಗಾರಿಕೆಯನ್ನು ನಾನೇ ಹೊರುತ್ತೇನೆಂದು ಹೇಳಿದ್ದಾರೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಯ ಕೆಲವೇ ಹೊತ್ತಿನ ಬಳಿಕ ಸಿಜೆಪಿ ವಕ್ತಾರರಾದ ಸೌರವ್ ದಾಸ್ ಮತ್ತು ಅಶುತೋಶ್ ರಾಂಕಾ ಸಿಜೆಪಿ ನಿಯೋಗವು ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ ಮತ್ತು ಜಿತೇಂದ್ರ ಸಿಂಗ್ ಅವರೊಂದಿಗೆ 3ನೇ ಸುತ್ತಿನ ಮಾತುಕತೆ ನಡೆಸಿತು. ಸಭೆಯ ನಂತರ ಕೇಂದ್ರ ಸಚಿವರು ಮತ್ತು ಸಿಜೆಪಿ ನಾಯಕರು ಜಂಟಿಯಾಗಿ ಸುದ್ದಿಗೋಷ್ಠಿ ನಡೆಸಿದರು.

ಸಿಜೆಪಿ ವಕ್ತಾರ ಸೌರವ್ ದಾಸ್ ಅವರು ಮಾತನಾಡಿ, ನೀಟ್ ಅಕ್ರಮದಿಂದಾಗಿ ಆತ್ಮಹತ್ಯೆ ಮಾಡಿಕೊಂಡ » ನಾಲ್ಕನೇ ಪುಟದಲ್ಲಿ





**"ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಮರುರೂಪಿಸುವ ನಿಟ್ಟಿನಲ್ಲಿ ಬೃಹತ್ ಹೆಜ್ಜೆಯಾಗಿದೆ. ಪ್ರಜಾಪ್ರಭುತ್ವ, ಸಂವಿಧಾನ ಮತ್ತು ತಮ್ಮ ಭವಿಷ್ಯವನ್ನು ರಕ್ಷಿಸಲು ರಸ್ತೆಗಿಳಿದ ಪ್ರತಿಯೊಬ್ಬರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ನಮ್ಮ 2 ಬೇಡಿಕೆಗಳು ಇನ್ನು ಉಳಿದಿವೆ. ಪ್ರಧಾನಿ ವಿದ್ಯಾರ್ಥಿಗಳ ಕ್ಷಮಾಪಣೆ ಕೇಳಬೇಕು ಹಾಗು ವಿದ್ಯಾರ್ಥಿಗಳ ಮೇಲೆ ಹಿಂಸಾಚಾರ ನಡೆಸಿದ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.**
**-ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ**

### ಜೋಶಿ ನೂತನ ಶಿಕ್ಷಣ ಸಚಿವ

ನವದೆಹಲಿ: ಕರ್ನಾಟಕದ ಸಂಸದ ಪ್ರಲ್ಹಾದ್ ಜೋಶಿ ಅವರಿಗೆ ಕೇಂದ್ರ ಶಿಕ್ಷಣ ಖಾತೆಯ ಹೊಣೆ ನೀಡಲಾಗಿದೆ ಎಂದು ವರದಿಯಾಗಿದೆ. ನೀಟ್ ಪರೀಕ್ಷಾ ಆಕ್ರಮಗಳಿಗೆ ಸಂಬಂಧಿಸಿದಂತೆ ಪ್ರತಿಭಟನೆಗಳು ತೀವ್ರಗೊಂಡ ಹಿನ್ನೆಲೆಯಲ್ಲಿ ಧರ್ಮೇಂದ್ರ ಪ್ರಧಾನ್ ಅವರು ಶಿಕ್ಷಣ ಸಚಿವ ಸ್ಥಾನಕ್ಕೆ ಶನಿವಾರ ಮಧ್ಯಾಹ್ನ ರಾಜೀನಾಮೆ ನೀಡಿದ ಬಳಿಕ, ಜೋಶಿ ಅವರಿಗೆ ಈ ಖಾತೆ ವಹಿಸಲಾಗಿದೆ ಎನ್ನಲಾಗಿದೆ.

## ಇಂದು ಪತ್ನಿ ಚನ್ನಮ್ಮ ಸಮಾಧಿ ಸ್ಥಳಕ್ಕೆ ದೇವೇಗೌಡರ ಭೇಟಿ

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಜು.26ರ ಭಾನುವಾರ ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿರುವ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಲಿದ್ದಾರೆ.

ಜು.30ರ ಗುರುವಾರ ಶ್ರೀಮತಿ ಚನ್ನಮ್ಮ ಅವರ 11ನೇ ದಿನದ ಕಾರ್ಯ ನೆರವೇರಲಿದೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಶನಿವಾರ ಸ್ಥಳಕ್ಕೆ ಭೇಟಿ ನೀಡಿ ಸಿದ್ಧತಾ ಕಾರ್ಯ ಪರಿಶೀಲಿಸಿದರು.

ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ನಿರೀಕ್ಷೆ ಇರುವುದರಿಂದ ಜರ್ಮನ್ ಟೆಂಟ್, ಪಾರ್ಕಿಂಗ್ ಸೇರಿ ಅಗತ್ಯ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಶನಿವಾರ ಹರದನಹಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದು, ಭಾನುವಾರ ಬೆಳಿಗ್ಗೆ 9 ಗಂಟೆಗೆ ಬೆಟ್ಟದ ತಪ್ಪಲಿಗೆ ಭೇಟಿ ನೀಡುವರು. ಸಮಾಧಿ ಸ್ಥಳದಲ್ಲಿ ನಡೆಯಲಿರುವ ವಿಷ್ಣು ಸಹಸ್ರನಾಮ ಹಾಗು ಪಾರಾಯಣ ಪೂಜಾ ವಿಧಿವಿಧಾನದಲ್ಲಿ ಪಾಲ್ಗೊಂಡು ನಂತರ 11ನೇ ದಿನದ ಕಾರ್ಯದ ಸಿದ್ಧತೆ ಕುರಿತು ಮಾಹಿತಿ ಪಡೆಯಲಿದ್ದಾರೆ.

ಗಣ್ಯರು ಭಾಗಿಯಾಗುವ ನಿರೀಕ್ಷೆ

ಜು.30ರ ಕಾರ್ಯಕ್ರಮದಲ್ಲಿ ರಾಜ್ಯ, ದೇಶದ ವಿವಿಧ ಭಾಗಗಳಿಂದ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಚನ್ನಮ್ಮ ಅವರು ಅಪಾರ ದೈವಭಕ್ತರಾಗಿದ್ದರಿಂದ ಧಾರ್ಮಿಕ ಕೈಂಕರ್ಯಕ್ಕೆ ಆದ್ಯತೆ ನೀಡಲಾಗಿದೆ. ಜೊತೆಗೆ ಅನ್ನಪೂರ್ಣೇಶ್ವರಿ ಎಂದೇ ಕರೆಸಿಕೊಂಡಿದ್ದ ಚನ್ನಮ್ಮ ಅವರ ಹೆಸರಿನಲ್ಲಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಮಾಡಿಸುವುದು ದೇವೇಗೌಡರ ಕುಟುಂಬಸ್ಥರ ಬಯಕೆಯಾಗಿದೆ. ಈ ಹಿನ್ನಲೆಯಲ್ಲಿ ಭರದ ಸಿದ್ಧತೆ ಕೈಗೊಳ್ಳಲಾಗಿದೆ.

ಜು.18ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಶ್ರೀಮತಿ ಚನ್ನಮ್ಮ ದೇವೇಗೌಡ ಅವರು ನಿಧನರಾಗಿದ್ದರು. ಜು.20ರಂದು ಮಾವಿನಕೆರೆ ಬೆಟ್ಟದಲ್ಲಿ ಅಂತ್ಯಕ್ರಿಯೆ ನೆರವೇರಿತು. ಸಮಾಧಿ ಸ್ಥಳವನ್ನು ಐತಿಹಾಸಿಕ ಸ್ಮಾರಕವಾಗಿಸಲು ಹೆಚ್.ಡಿ. ದೇವೇಗೌಡ ಹಾಗು ಪುತ್ರರು ನಿರ್ಧರಿಸಿದ್ದು ಆ ನಿಟ್ಟಿನಲ್ಲಿ ಕಾರ್ಯಯೋಜನೆ ಹಾಕಿಕೊಂಡಿದ್ದಾರೆ. ಜು.30ರಂದು ಆ ಕುರಿತು ಪೂರ್ಣ ಮಾಹಿತಿ ನೀಡುವುದಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.



## ಧರ್ಮೇಂದ್ರ ಪ್ರಧಾನ್ ರಾಜೀನಾಮೆ: ವಿಜಯೋತ್ಸವ

• ಪ್ರಜೋದಯ ವರದಿ

**ಹಾಸನ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ದೇಶಾದ್ಯಂತ ನಡೆದ ಪ್ರತಿಭಟನೆಗೆ ಮಣಿದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ನಗರದ ಹೇಮಾವತಿ ಪ್ರತಿಮೆ ಬಳಿ ಎಡಪಕ್ಷಗಳಿಂದ ಸಂಭ್ರಮಾಚರಿಸಲಾಯಿತು.

ದಲಿತ ಮುಖಂಡ ಸಂದೇಶ್ ಅವರು ಮಾತನಾಡಿ, ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ನೈತಿಕ ಹೊಣೆ ಹೊತ್ತು ಮೊದಲೇ ರಾಜೀನಾಮೆ ನೀಡಬೇಕಿದ್ದ ಸಚಿವ ಧರ್ಮೇಂದ್ರ ಪ್ರಧಾನ್ ಮೊಂಡುತನ ಪ್ರದರ್ಶಿಸಿದರು. ದೇಶದ ಯುವಜನತೆ ಬಹಿರಂಗ ಹೋರಾಟಕ್ಕಿಳಿದ ಪರಿಣಾಮ ರಾಜೀನಾಮೆ ನೀಡಬೇಕಾಯಿತು. ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಇಲ್ಲಿ ಸರ್ವಾಧಿಕಾರಿಯಂತೆ ವರ್ತಿಸಿದರೆ ಸಹಿಸುವುದಿಲ್ಲ. ನೆಲದ ಕಾನೂನಿಗೆ ಗೌರವಿಸುವುದು ಎಲ್ಲರ ಜವಾಬ್ದಾರಿ. ಯುವಕರು ತಿರುಗಿ ಬಿದ್ದರೆ ಪರಿಣಾಮ ಏನಾಗುತ್ತದೆಂಬುದಕ್ಕೆ ಈ ಘಟನೆಯೇ ಸಾಕ್ಷಿ ಎಂದರು.

ಕೇಂದ್ರ ಸರ್ಕಾರ ಇನ್ನಾದರೂ ಉದ್ಧಟತನ ಪ್ರದರ್ಶಿಸದೆ ಜನಸಾಮಾನ್ಯರ ಸಂಕಷ್ಟದಲ್ಲಿ ಭಾಗಿಯಾಗಬೇಕು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದ ಮಾನಸಿಕವಾಗಿ ನೊಂದು ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿಗಳ ಕುಟುಂಬಕ್ಕೆ ಸೂಕ್ತ ಪರಿಹಾರ ಕಲ್ಪಿಸಬೇಕು. ಪ್ರತಿಭಟನಾನಿರತ ವಿದ್ಯಾರ್ಥಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ವಾಪಾಸ್ ಪಡೆಯಬೇಕೆಂದು ಆಗ್ರಹಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ವಿಜಯಕುಮಾರ್, ಅಂಬುಗ ಮಲ್ಲೇಶ್, ರಮೇಶ್, ಹೆಚ್.ಆರ್.ನವೀನ್‌ಕುಮಾರ್ ಮತ್ತಿತರರಿದ್ದರು. ಸ್ಟುಡೆಂಟ್ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ಪ್ರಾಂತ ರೈತ ಸಂಘ, ಸಿಪಿಐ(ಎಂ), ಡಿವೈಎಫ್ಐ ಹಾಗು ದಲಿತಪರ ಸಂಘಟನೆಗಳ ಮುಖಂಡರು ಸಿಹಿ ವಿತರಿಸಿ ವಿಜಯೋತ್ಸವದಲ್ಲಿ ಭಾಗಿಯಾದರು.



### ಇಂದು ಕಾರ್ಗಿಲ್ ವಿಜಯ್ ದಿವಸ್

ಹಾಸನ: ಜಿಲ್ಲಾ ರಾಷ್ಟ್ರೀಯ ಮಾಜಿ ಸೈನಿಕರ ಸಮನ್ವಯ ಸಮಿತಿಯಿಂದ ಜು.26ರ ಭಾನುವಾರ ಬೆಳಿಗ್ಗೆ 9.30ಕ್ಕೆ ನಗರದಲ್ಲಿ ಕಾರ್ಗಿಲ್ ವಿಜಯ್ ದಿವಸ್ ಹಮ್ಮಿಕೊಳ್ಳಲಾಗಿದೆ.

ನಗರದ ಫೀಲ್ಡ್ ಮಾರ್ಷಲ್ ಕರಿಯಪ್ಪ ಉದ್ಯಾನದಲ್ಲಿ ಸಮಾರಂಭ ಆಯೋಜಿಸಿದ್ದು, ಸೈನಿಕರು, ಮಾಜಿ ಸೈನಿಕರು ಹಾಗು ಕುಟುಂಬಸ್ಥರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದೆ.

## ಸಂಘಟನಾ ಸೃಜನ್ ಅಭಿಯಾನಕ್ಕೆ ಚಾಲನೆ | ತಮಿಳುನಾಡು ಸಂಸದೆ ಸುಧಾ ಭೇಟಿ

# ಕಾಂಗ್ರೆಸ್ ಜಿಲ್ಲಾಧ್ಯಕ್ಷರ ನೇಮಕಕ್ಕೆ ಅಭಿಪ್ರಾಯ ಸಂಗ್ರಹ

• ಪ್ರಜೋದಯ ವರದಿ

**ಹಾಸನ:** ಕಾಂಗ್ರೆಸ್ ಜಿಲ್ಲಾಧ್ಯಕ್ಷರ ನೇಮಕ ವಿಚಾರವಾಗಿ ತಳಮಟ್ಟದ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಲು ಪಕ್ಷದ ನಾಯಕರು ಸಂಘಟನಾ ಸೃಜನ್ ಅಭಿಯಾನ ಪ್ರಾರಂಭಿಸಿದ್ದು, ಜಿಲ್ಲೆಯಲ್ಲೂ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ಎಐಸಿಸಿ ವೀಕ್ಷಕಿ ಹಾಗು ತಮಿಳುನಾಡಿನ ಮೈಲಾಡುತುರೈ ಕ್ಷೇತ್ರದ ಸಂಸದೆ ಆರ್.ಸುಧಾ ಅವರು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಸಂಘಟನಾ ಸೃಜನ್ ಅಭಿಯಾನದ ನಿರ್ಣಯ ಕೈಗೊಳ್ಳಲಾಗಿತ್ತು. ಅದರಂತೆ ಜು.24ರಂದು ಬೆಂಗಳೂರಿನಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಎಲ್ಲಾ ಜಿಲ್ಲೆಗಳಲ್ಲೂ ಯೋಜನೆ ಕಾರ್ಯಗತಗೊಂಡಿದ್ದು ಪಕ್ಷವನ್ನು ಬೇರು ಮಟ್ಟದಿಂದ ಸದೃಢಗೊಳಿಸುವುದು, ಬ್ಲಾಕ್ ಕಾಂಗ್ರೆಸ್, ಗ್ರಾಮ ಪಂಚಾಯಿತಿ ಮಟ್ಟದಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು. ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಪ್ರವಾಸ ಮಾಡಲಾಗುವುದು. ತಳಮಟ್ಟದ ಕಾರ್ಯಕರ್ತನಿಂದ ಹಿಡಿದು, ವಿಧಾನ ಪರಿಷತ್ ಸದಸ್ಯರು, ಶಾಸಕರು, ಸಂಸದರು, ಮಾಜಿ ಜನಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹಿಸಲಾಗುವುದೆಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ಸಾಮಾನ್ಯ ಕಾರ್ಯಕರ್ತರಿಂದ ಯಾರು ಬೇಕಾದರೂ ಅರ್ಜಿ ಸಲ್ಲಿಸಬಹುದು. ಈ ಪ್ರಕ್ರಿಯೆ ಅತ್ಯಂತ ಪಾರದರ್ಶಕವಾಗಿ ನಡೆಯಲಿದೆ. ಎಲ್ಲರ ಅಭಿಪ್ರಾಯ ಸಂಗ್ರಹ ಹಾಗು ಜಿಲ್ಲಾಧ್ಯಕ್ಷ ಹುದ್ದೆಯ ಆಕಾಂಕ್ಷಿಗಳ ಅರ್ಜಿ ಸಂಗ್ರಹಿಸಿ ಆ.18 ರೊಳಗೆ ಎಐಸಿಸಿಗೆ ಸಲ್ಲಿಸಲಾಗುವುದು. ಅವರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಕಾರ್ಯಕರ್ತರ ಅಭಿಪ್ರಾಯ ಪಡೆದು, ಹೊಸ ನಾಯಕತ್ವ ಸೃಷ್ಟಿ ಮಾಡಲು ಎಲ್ಲಾ ನಾಯಕರು ಸೇರಿ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಜನಪ್ರತಿನಿಧಿಯನ್ನು ಮತದಾರರು ಆಯ್ಕೆ ಮಾಡುತ್ತಾರೆ. ಅಂತೆಯೇ ಪಕ್ಷದ ಅಧ್ಯಕ್ಷರ ಆಯ್ಕೆ ಕಾರ್ಯಕರ್ತರು, ಮುಖಂಡರಿಂದ ಆಗಲಿ ಎಂದು ಈ ಹೆಜ್ಜೆ ಇಡಲಾಗಿದೆ. ಅದಕ್ಕಾಗಿ ವೀಕ್ಷಕರ ನೇಮಕ ಮಾಡಲಾಗಿದೆ. ಅವರು ಜಿಲ್ಲೆಯಲ್ಲಿ ಪ್ರವಾಸ ಮಾಡಿ, ಆಂತರಿಕ ಸ್ಥಿತಿಗತಿ ಅರಿತು ಪಕ್ಷ ಬಲವರ್ಧನೆ ಉದ್ದೇಶದಿಂದ ಸೂಕ್ತ ನಿರ್ಣಯ ಕೈಗೊಳ್ಳಲಿದ್ದಾರೆಂದರು.

ದೇಶಕ್ಕೆ ಕಾಂಗ್ರೆಸ್ ದೊಡ್ಡ ಶಕ್ತಿಯಾಗಿ ಬೆಳೆಯಬೇಕು, ಹಿಂದೆ ಮೋದಿ ಅವರು ವಾರ್ಷಿಕ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದಿದ್ದರು. ಅವರು ನೀಡಿದ ಭರವಸೆ ಸಂಪೂರ್ಣ ಹುಸಿಯಾಗಿದೆ. ಇದೀಗ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುವುದು ಒಂದು ಕಡೆಯಾದರೆ, ಉದ್ಯೋಗ ಗಿಟ್ಟಿಸಿಕೊಳ್ಳಲು ನಡೆಯುವ ಪರೀಕ್ಷೆಗಳಲ್ಲೂ ಅಕ್ರಮ ನಡೆಯುತ್ತಿರುವುದನ್ನು ಖಂಡಿಸಿ ವಿದ್ಯಾರ್ಥಿ ಸಮೂಹ ಹೋರಾಟಕ್ಕಿಳಿದಿದೆ. ಈ ಎಲ್ಲಾ ಬೆಳವಣಿಗೆ ಗಮನಿಸಿದರೆ ಮುಂದಿನ ದಿನಗಳಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿಯಾಗುವ ಲಕ್ಷಣ ಗೋಚರಿಸುತ್ತಿದೆಯೆಂದು ವಿಶ್ವಾಸ ವ್ಯಕ್ತಪಡಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಂದೀಪ್, ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಈ.ಹೆಚ್.ಲಕ್ಷ್ಮಣ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಪರಾಜಿತ ಅಭ್ಯರ್ಥಿಗಳಾದ ಬನವಾಸೆ ರಂಗಸ್ವಾಮಿ, ಎಂ.ಎ. ಗೋಪಾಲಸ್ವಾಮಿ, ಶ್ರೀಧರ್‌ಗೌಡ, ಮುರಳಿ ಮೋಹನ್, ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ, ಮುಖಂಡರಾದ ಬಾಗೂರು ಮಂಜೇಗೌಡ, ಹೆಚ್.ಕೆ.ಮಹೇಶ್, ದೇವರಾಜೇಗೌಡ ಮೊದಲಾದವರಿದ್ದರು.



## ರಾಹುಲ್ ಗಾಂಧಿ ಪ್ರಧಾನಿಯಾದರೆ ದೇಶದ ಭವಿಷ್ಯ ಉಜ್ವಲ: ಶ್ರೇಯಸ್

• ಪ್ರಜೋದಯ ವರದಿ

**ಹಾಸನ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿಯಾದರೆ ಮಾತ್ರ ದೇಶದ ಭವಿಷ್ಯ ಉಜ್ವಲವಾಗಲಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಕಳೆದ 12 ವರ್ಷಗಳಲ್ಲಿ 150ಕ್ಕೂ ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಆದರೂ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿಲ್ಲ. ದೇಶ ದಲ್ಲಿ ಡಾ. ಅಂಬೇಡ್ಕರ್ ಅವರ ಸಂವಿಧಾನ, ಪ್ರಜಾಪ್ರಭುತ್ವ ಜೀವಂತ ಇದೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಬೀದಿಗಿಳಿದ ವಿದ್ಯಾರ್ಥಿಗಳನ್ನು ಲಾಠಿಚಾರ್ಜ್ ಮೂಲಕ ನಿಯಂತ್ರಿಸುವ ವ್ಯವಸ್ಥಿತ ಪಿತೂರಿಯನ್ನು ಕೇಂದ್ರ ಸರ್ಕಾರ ನಡೆಸಿತು ಎಂದು ಆರೋಪಿಸಿದರು.

ದೇಶಕ್ಕೆ ಒಳ್ಳೆಯ ದಿನ ಬರಲಿದೆ ಎಂದು ಮೋದಿ ಹೇಳಿದ್ದರು. ಆದರೆ ಆ ದಿನಗಳು ಎಲ್ಲಿದೆ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಕೇಂದ್ರದಲ್ಲಿ ದಪ್ಪ ಚರ್ಮದ ಸರ್ಕಾರ ಅಧಿಕಾರದಲ್ಲಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು ಹಾಗು ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದರು.



# ಜು.28 ರಂದು ಶ್ರೀಮತಿ ಚನ್ನಮ್ಮಗೆ ನುಡಿನಮನ

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರಿಗೆ ನುಡಿ ನಮನ ಕಾರ್ಯಕ್ರಮವನ್ನು ಜು.28ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಜಿಲ್ಲಾ ನಾಗರಿಕರ ವೇದಿಕೆ, ಮಹಿಳಾ ಸಂಘಟನೆಗಳ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಹೆಚ್.ಡಿ. ದೇವೇಗೌಡರ ಕುಟುಂಬ ಸದಸ್ಯರು ಹಾಗು ಜಿಲ್ಲೆಯ ಎಲ್ಲಾ ಶಾಸಕರನ್ನು ಆಹ್ವಾನಿಸಲಾಗುತ್ತಿದೆ ಎಂದರು.

ಚನ್ನಮ್ಮ ಅವರು ಜಿಲ್ಲೆಯ ಮಾದರಿ ಹೆಣ್ಣುಮಗಳು. ದೇವೇಗೌಡರು ಪ್ರಧಾನಿಯಾಗಿ ದೆಹಲಿಗೆ ಹೋದರೂ ಚನ್ನಮ್ಮ ಅಲ್ಲಿಯೂ ಹಳ್ಳಿಯ ಪ್ರತಿನಿಧಿಯಾಗಿದ್ದರು. ಅಡುಗೆ ಮನೆಯಿಂದಲೇ ಸಮಾಜ ಸೇವೆ ಮಾಡಬಹುದು ಎಂಬುದನ್ನು ಸಾಬೀತುಪಡಿಸಿದರು ಎಂದರು.

ಜಯಲಕ್ಷ್ಮಮ್ಮ ಮುನಿವೆಂಕಟೇಗೌಡ ಅವರು ಮಾತನಾಡಿ, ದೇವೇಗೌಡರು ನಮ್ಮ ಕುಟುಂಬದ ನಡುವೆ 1957ರಿಂದಲೂ ಸಂಬಂಧ ಇದೆ. ಆ ಕಾಲದಿಂದಲೂ ಮುನಿವೆಂಕಟೇಗೌಡ ರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರು. ರಾಜಕೀಯ ಚರ್ಚೆ ನಮ್ಮ ಮನೆಯಲ್ಲೇ ನಡೆಯುತ್ತಿತ್ತು. ಮುನಿವೆಂಕಟೇಗೌಡರು ಎಂದರೆ ದೇವೇಗೌಡರಿಗೆ ಅಪಾರ ನಂಬಿಕೆ, ಚನ್ನಮ್ಮ ನನಗೆ ಸಹೋದರಿ ರೂಪದಲ್ಲಿದ್ದರು. ವಿಶ್ವಾಸ, ಪ್ರೀತಿ, ಬವಣಿಕೆ ಚೆನ್ನಾಗಿತ್ತು. ಅವರ ಅಗಲಿಕೆ ಅತೀವ ನೋವು ತಂದಿದೆ ಎಂದರು.

ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ ಅವರು ಮಾತನಾಡಿ, ತಮ್ಮ ಹಾಗೂ ದೇವೇಗೌಡರ ಸಂಬಂಧ ನೆನೆದರು. ನಮ್ಮದು ರಾಜಕೀಯ ಹೊರತಾಗಿನ ಸಂಬಂಧ. ವೈಯಕ್ತಿಕವಾಗಿ ಅಗಾಧ ಪ್ರೀತಿ, ಅಭಿಮಾನ ಇದೆ. ಚನ್ನಮ್ಮ ಅವರು ನಗರದಲ್ಲಿ ಒಕ್ಕಲಿಗರ ಮಹಿಳಾ ಹಾಸ್ಟೆಲ್ ಮಾಡುವುದಕ್ಕೆ ಪ್ರೋತ್ಸಾಹಿಸಿದ್ದರು. ದೇವರು ಅವರ ಆತ್ಮಕ್ಕೆ ಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಎಸ್.ಪಾಷ, ಕಟ್ಟಾಯ ಶಿವಕುಮಾರ್, ಶಿವರಾಮೇಗೌಡ, ಜಯರಾಂ ಇದ್ದರು.




## ಕೆರೆ ಏರಿ ರಸ್ತೆ ಮಧ್ಯಭಾಗ ಕುಸಿಯುವ ಆತಂಕ

• ಪ್ರಜೋದಯ ವರದಿ

**ಹಾಸನ:** ಬೆಳಗೋಡು-ಹಾಸನ ಸಂಪರ್ಕಿಸುವ ಮುಖ್ಯರಸ್ತೆಯ ಕೆರೆ ಏರಿಯಲ್ಲಿ ಬೃಹತ್ ಗುಂಡಿ ಉಂಟಾಗಿ ರಸ್ತೆ ಮಧ್ಯಭಾಗ ಕುಸಿಯುತ್ತಿರುವುದರಿಂದ ವಾಹನ ಸವಾರರು ಹಾಗು ರೈತರಲ್ಲಿ ಆತಂಕ ಮನೆ ಮಾಡಿದೆ. ಮಳೆ ಮುಂದುವರಿದರೆ ಕೆರೆ ಏರಿ ಒಡೆಯುವ ಅಪಾಯ ಎದುರಾಗಿದ್ದು, ಕೆಳಭಾಗದಲ್ಲಿರುವ ಕೃಷಿ ಜಮೀನುಗಳಿಗೆ ಭಾರೀ ಹಾನಿಯಾಗುವ ಸಾಧ್ಯತೆ ಇದೆ.

ಈ ಕುರಿತು ಪ್ರತಿಕ್ರಿಯಿಸಿರುವ ಮಲೆನಾಡು ರಕ್ಷಣಾ ಸೇನೆ ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರ, ಹೊಸಕೊಪ್ಪಲು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತಕ್ಷಣವೇ ಶಾಶ್ವತ ದುರಸ್ತಿ ಕಾಮಗಾರಿ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ದುರಸ್ತಿ ವಿಳಂಬವಾದರೆ ಕೆರೆ ಏರಿ ಒಡೆದು ಕೆಳಭಾಗದಲ್ಲಿರುವ ಗದ್ದೆಗಳು ಜಲಾವೃತವಾಗಿ ರೈತರಿಗೆ ಅಪಾರ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದ್ದಾರೆ.

ರಸ್ತೆ ಮಧ್ಯೆ ಉಂಟಾಗಿರುವ ಬೃಹತ್ ಗುಂಡಿಯಿಂದ ವಿಶೇಷವಾಗಿ ರಾತ್ರಿ ವೇಳೆಯಲ್ಲಿ ವಾಹನ ಸಂಚಾರ ಅಪಾಯಕಾರಿಯಾಗಿದ್ದು, ಗಂಭೀರ ರಸ್ತೆ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿದೆ. ಸಾರ್ವಜನಿಕರ ಸುರಕ್ಷತೆ, ರೈತರ ಹಿತಾಸಕ್ತಿ ಹಾಗು ಕೃಷಿ ಭೂಮಿಯ ರಕ್ಷಣೆಯ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಕೆರೆ ಏರಿ ಹಾಗೂ ರಸ್ತೆಯನ್ನು ಬಲಪಡಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.



## ಎಸ್‌ಐಆರ್: ಬಿಎಲ್‌ಓಗೆ ನಿಂದನೆ ಆರೋಪ

• ಪ್ರಜೋದಯ ವರದಿ

**ಹೊಳೆನರಸೀಪುರ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ತೊಡಗಿದ್ದ ಮಹಿಳಾ ಬಿಎಲ್‌ಓ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿ, ಗಣತಿ ನಮೂನೆ ಅರ್ಜಿಯನ್ನು ಎಸೆದು ದುಂಡಾವರ್ತನೆ ತೋರಿರುವ ಘಟನೆ ತಾಲ್ಲೂಕಿನ ರಾಮೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಸುಜಾತ ಹಲ್ಲೆಗೊಳಗಾದ ಬಿಎಲ್‌ಓ ಆಗಿದ್ದು ಅದೇ ಗ್ರಾಮದ ಯೋಗೇಶ್ ಹಾಗು ಆತನ ಪುತ್ರ ಸುಬ್ರಮಣ್ಯ ವಿರುದ್ಧ ಆರೋಪ ಕೇಳಿ ಬಂದಿದೆ. ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗು ಬಿಎಲ್‌ಓ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸುಜಾತ ಗ್ರಾಮದ ಯೋಗೇಶ್ ಎಂಬುವವರ ಕುಟುಂಬದ ಎನ್ಯುಮರೇಷನ್ ಫಾರಂ ಭರ್ತಿ ಮಾಡಿದ್ದರು. ಅಂಗನವಾಡಿಗೆ ಬಂದ ಯೋಗೇಶ್ ಹಾಗು ಆತನ ಪುತ್ರ ಸುಬ್ರಮಣ್ಯ ಸರಿಯಾಗಿ ಭರ್ತಿ ಮಾಡಿಲ್ಲ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದ್ದಾರೆಂದು ಬಿಎಲ್‌ಓ ಸುಜಾತ ಕಣ್ಣೀರಿಟ್ಟರಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸರು ಆಗಮಿಸಿದ್ದು ಅವರಿಗೂ ಹೆದರದೆ ಪೊಲೀಸರ ಎದುರೇ ಯೋಗೇಶ್ ಹಾಗು ಪುತ್ರ ಸುಬ್ರಮಣ್ಯ ಮಹಿಳಾ ಬಿಎಲ್‌ಓಗೆ ನಿಂದಿಸಿ ಅಂಗನವಾಡಿಯಲ್ಲಿದ್ದ ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿದ್ದಾರೆ ಎನ್ನಲಾಗಿದೆ.

ಬಿಎಲ್‌ಓ ಸುಜಾತ ಅವರು ಮಾತನಾಡಿ, ಅಧಿಕಾರಿಗಳು ಸೂಚಿಸಿರುವಂತೆ ಅರ್ಜಿಯನ್ನು ಭರ್ತಿ ಮಾಡಲಾಗಿದೆ. ಯೋಗೇಶ್ ಮತ್ತು ಅವರ ಪುತ್ರ ಸರಿಯಾಗಿ ಭರ್ತಿ ಮಾಡಿಲ್ಲವೆಂದು ನಿಂದಿಸಿ, ತಲೆಗೆ ಹೊಡೆದು ಹಲ್ಲೆ ನಡೆಸಿದ್ದಾರೆ. ಮೊಬೈಲ್ ಕಿತ್ತುಕೊಂಡಿದ್ದಾರೆ. ಅದರಿಂದ ಮಾನಸಿಕವಾಗಿ ನೋವಾಗಿದೆ. ಈ ಬಗ್ಗೆ ಪೊಲೀಸರಿಗೆ ಕರೆ ಮಾಡಿ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.



## ನಾಳೆ ದೆಹಲಿಯಲ್ಲಿ ಸಂಸದರ ಸಭೆ | ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

# ಬರ ಪರಿಸ್ಥಿತಿ: ಕೇಂದ್ರದ ಬಳಿ ಸರ್ವಪಕ್ಷ ನಿಯೋಗ

• ಪ್ರಜೋದಯ ವರದಿ

**ಬೆಂಗಳೂರು:** ಬರ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರದ ಬಳಿ ಚರ್ಚಿಸಲು ಸರ್ವಪಕ್ಷ ನಿಯೋಗ ಕರೆದುಕೊಂಡು ಹೋಗಲಾಗುವುದು. ದೆಹಲಿಯಲ್ಲಿ ಸೋಮವಾರ ಸಂಸದರ ಸಭೆ ನಡೆಸಲಾಗುವುದೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಚಿತ್ರದುರ್ಗದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಲು ಸಾಧ್ಯವಿಲ್ಲವೆಂದು ಕಾವೇರಿ ನೀರು ನಿರ್ವಹಣಾ ಸಮಿತಿ ಮುಂದೆ ಹೇಳಲಾಗಿದೆ. ಅವರಿಗೂ ಪರಿಸ್ಥಿತಿಯ ಬಗ್ಗೆ ಅರಿವಿದೆ. ಪ್ರಧಾನಿ ಮೋದಿ ಅವರು ಸಹ ಎಲ್ ನೀನೋ ಪರಿಣಾಮದ ಬಗ್ಗೆ ಮಾತನಾಡಿದ್ದಾರೆ. ಈ ಎಚ್ಚರಿಕೆಯನ್ನು ನಾವು ಕಡೆಗಣಿಸಬಾರದು. ನಾನು ಸಹ ಪ್ರಧಾನಿಯವರಿಗೆ ಬರ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದ್ದೇನೆ. ಉಪ ಮುಖ್ಯಮಂತ್ರಿ ಅವರೂ ಸಹ ಬರದ ಬಗ್ಗೆ ವಸ್ತುಸ್ಥಿತಿ ತಿಳಿಸಲು ಪ್ರಧಾನಿ ಯವರ ಬಳಿಗೆ ಶೀಘ್ರ ನಿಯೋಗ ಕಳುಹಿಸಲಿದ್ದಾರೆ ಎಂದರು.

ಬೆಳೆ ವಿಮೆ ಬಗ್ಗೆ ರೈತರಿಗೆ ಅಧಿಕಾರಿಗಳು ನೆರವಾಗಬೇಕು. ಅರಿವು ಮೂಡಿಸಬೇಕು. ರೈತರು ಯಾವುದೇ ಕಾರಣಕ್ಕೂ ಮುಂದಿನ ಮಳೆ, ಅಣೆಕಟ್ಟು ನೀರು ನೆಚ್ಚಿಕೊಂಡು ಬೆಳೆ ಹಾಕಬಾರದು. ನೀರಾವರಿ ಸಮಿತಿ, ಅಧಿಕಾರಿಗಳು ಹಾಗು ಸರ್ಕಾರದ ಮಾರ್ಗದರ್ಶನ ಆಧಾರದ ಮೇಲೆ ಬೆಳೆ ಹಾಕಿಕೊಳ್ಳಬೇಕು. ನಿಮ್ಮಷ್ಟಕ್ಕೆ ನೀವೇ ಬೆಳೆ ಹಾಕಿದರೆ ನಷ್ಟಕ್ಕೆ ನೀವೇ ಹೊಣೆಯಾಗಬೇಕಾಗುತ್ತದೆ. ನಮ್ಮಿಂದ ಸಹಕಾರ ನೀಡಲು ಆಗುವುದಿಲ್ಲ. ಆಲಮಟ್ಟಿ ಹೊರತಾಗಿ ಬೇರೆ ಯಾವ ಜಲಾಶಯ ದಲ್ಲೂ ನೀರಿನ ಪರಿಸ್ಥಿತಿ ಉತ್ತಮವಾಗಿಲ್ಲ ಎಂದರು.

**ಶಾಸಕರು ಸಮಸ್ಯೆ ಹೇಳಿಕೊಳ್ಳಬಹುದು**

ಶಾಸಕರ ಸಮಸ್ಯೆ ಆಲಿಸಲು ಇಬ್ಬರು ಅಧಿಕಾರಿಗಳ ನೇಮಕ ಮಾಡಿದ್ದೇನೆ. ಎಲ್ಲಾ ಶಾಸಕರು ನೇರವಾಗಿ ನನ್ನ ಬಳಿಯೇ ಯಾವುದೇ ಸಮಸ್ಯೆ ಇದ್ದರೂ ಹೇಳಬಹುದು. ಅದನ್ನು ಬಗೆಹರಿಸಲು ಆದಷ್ಟು ಪ್ರಯತ್ನ ಮಾಡುತ್ತೇನೆ. ಆಗಸ್ಟ್ ಎರಡನೇ ವಾರ ಅಥವಾ 6 ನೇ ತಾರೀಕು ವಿಧಾನಸಭೆ ಅಧಿವೇಶನ ನಡೆಯಬಹುದು. ಎಸ್‌ಐಆರ್‌ನಿಂದ » ನಾಲ್ಕನೇ ಪುಟದಲ್ಲಿ



### ಮುಂದಿನ ವಾರ ಸಚಿವ ಸಂಪುಟ ವಿಸ್ತರಣೆ

ಮುಂದಿನ ವಾರ ಸಚಿವ ಸಂಪುಟ ವಿಸ್ತರಣೆ ಆಗಬಹುದು. ಆಗ ಎಲ್ಲಾ ಮಂತ್ರಿಗಳು ಕೈ ಜೋಡಿಸಿ ಕೆಲಸ ಮಾಡಬೇಕಾಗುತ್ತದೆ. ಒಟ್ಟಾಗಿ ರಾಜ್ಯದ ಬರ ಪರಿಸ್ಥಿತಿ ಅವಲೋಕಿಸಬೇಕು. ರೈತರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಬೇಕು. ಇದೇ ನಮ್ಮ ಮುಂದಿರುವ ಹೊಣೆಗಾರಿಕೆ. ಜಿಲ್ಲಾಡಳಿತವು ಗ್ರಾಮೀಣ ಭಾಗದ ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ಕುಡಿಯುವ ನೀರು ಪೂರೈಕೆಗೆ 1 ಕೋಟಿ ರೂ. ವರೆಗೆ ಖರ್ಚು ಮಾಡಬಹುದು ಎಂದು ಬೆಳಗಾವಿ ಸಭೆಯಲ್ಲಿ ತೀರ್ಮಾನ ಮಾಡಲಾಗಿತ್ತು. ಈ ಬಗ್ಗೆ ನಿರ್ಲಕ್ಷ್ಯ ಸಲ್ಲದು ಎಂದು ಮುಖ್ಯಮಂತ್ರಿ ಎಚ್ಚರಿಸಿದರು.


> ಅವರೇನೂ ತೆಪ್ಪಗೆ ಅದನ್ನು ಒಪ್ಪಿಕೊಳ್ಳಲಿಲ್ಲ. ತಮ್ಮಲ್ಲಿ ಜಾಗೃತವಾಗಿರುವ ಆಧುನಿಕ ಮಹಿಳಾಪ್ರಜ್ಞೆಗೆ ನೀವು ಅಪಚಾರ ಮಾಡುತ್ತಿದ್ದೀರಿ ಎಂದು ಗಾಂಧೀಜಿಯವರನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು. ಯಾವ ಚಳುವಳಿಯೂ ತಾವಿಲ್ಲದೆ ನಡೆಯಕೂಡದು ಎಂದು ಸ್ಪಷ್ಟವಾಗಿ ಹೇಳಿದರು. ದಾದಾಬಾಯಿ ನವರೋಜಿಯವರ ಮೊಮ್ಮಗಳು ಕುರ್ಷೆದ್ ಬೆನ್ ನವರೋಜಿ ಒಂದು ಸಿಟ್ಟಿನ ಪತ್ರವನ್ನು ಸಹ ಬರೆದು ಗಾಂಧಿಗೆ ರವಾನಿಸಿದರು.

# ಎಸ್. ಜಾನಕಿಗೆ ಯಾಕೆ ಕೇವಲ ಪದ್ಮ?

ಆರು ದಶಕಗಳಲ್ಲಿ ಜಾನಕಿಯಮ್ಮ ಹದಿನೇಳು ಭಾಷೆಗಳಲ್ಲಿ ಸುಮಾರು ಐವತ್ತು ಸಾವಿರಕ್ಕೂ ಮಿಕ್ಕಿ ಹಾಡುಗಳನ್ನು ಹಾಡಿದ್ದಾರೆ. ದಕ್ಷಿಣ ಭಾರತದ ಕೋಗಿಲೆ ಎಂಬ ಬಿರುದು ರಾಷ್ಟ್ರೀಯ ಪಕ್ಷಪಾತವೆಂಬ ಹುಣ್ಣಿನತ್ತ ಬೆರಳು ಮಾಡಿ ತೋರಿಸುತ್ತದೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹಿಂದಿಯಲ್ಲಿ ಹಾಡಿದ ಲತಾ ಮಂಗೇಶ್ಕರ್ ಭಾರತದ ರತ್ನವಾದರೆ ಜಾನಕಿಯಮ್ಮ ಕೇವಲ ದಕ್ಷಿಣದ ಕೋಗಿಲೆಯಾಗಿ ಉಳಿಯುತ್ತಾರೆ.

ತಮ್ಮ ಬದುಕಿನ ಐವತ್ತೈದು ವರ್ಷಗಳನ್ನು ಸಂಗೀತದಲ್ಲಿ ಕಳೆದ ಮೇಲೆ ಅವರ ಎಪ್ಪತ್ತೈದು ವರ್ಷ ವಯಸ್ಸಿನಲ್ಲಿ (2013)ರಲ್ಲಿ ಪದ್ಮಭೂಷಣಕ್ಕೆ ರಾಷ್ಟ್ರೀಯ ಸರ್ಕಾರ ಅವರನ್ನು ಆಯ್ಕೆ ಮಾಡಿದಾಗ ಜಾನಕಿಯಮ್ಮ ವಿನಯದಿಂದಲೇ ತಾನು ರತ್ನದ ಸಾಮಗ್ರಿ ಎಂದು ಗುರುತಿಸುವ ಪ್ರಜ್ಞಾವಂತಿಕೆ ಮತ್ತು ವಿವೇಚನೆ ಇಲ್ಲದ ಸರಕಾರಗಳ ಪದ್ಮ-ಗಿದ್ಮ ತನಗೆ ಬೇಕಿಲ್ಲ, ಎಂದು ಹೇಳಿ ಎದೆ ಮುಟ್ಟಿಕೊಂಡು ನೋಡಿಕೊಳ್ಳುವಂತೆ ಮಾಡಿದ್ದರು, ನಿಜ. ಆದರೆ ಹಿಂದಿ ಮಾತ್ರ ರತ್ನಕ್ಕೆ ಯೋಗ್ಯ, ದಕ್ಷಿಣ ಭಾರತೀಯ ಭಾಷೆಗಳಲ್ಲ ಎಂಬ ರಾಷ್ಟ್ರೀಯ ಸರಕಾರದ ಪಕ್ಷಪಾತದಲ್ಲಿ ಬದಲಾವಣೆಯೇನೂ ಆಗಲಿಲ್ಲ.

2014ರ ನಂತರ ಅಂತಹ ನಿಷ್ಪಕ್ಷಪಾತ ವಿವೇಚನೆಯನ್ನು ನಿರೀಕ್ಷಿಸುವುದು ಇನ್ನಷ್ಟು ಮೂರ್ಖತನವೇ. ಒಂದಕ್ಕಿಂತ ಹೆಚ್ಚು ಹಿಂದಿ ರಾಜ್ಯಗಳು ಬದುಕುಳಿಯುವುದು ದಕ್ಷಿಣ ಭಾರತ ಕಟ್ಟುವ ತೆರಿಗೆಯಿಂದಲೇ ಎಂಬ ಆರ್ಥಿಕ ಸತ್ಯ ಗೊತ್ತಿದ್ದವರಿಗೆ ಈ ಸಾಂಸ್ಕೃತಿಕ ಅನ್ಯಾಯ ಇನ್ನಷ್ಟು ಘೋರವಾಗಿ ಕಾಣಿಸಬಲ್ಲುದು. ಬದುಕಿರುವಾಗ ಪ್ರತಿಭೆ-ಸೇವೆಗಳನ್ನು ಗುರುತಿಸದೇ ಮರೆಯಾದ ಮೇಲೆ ಕೊಡುವ ಪ್ರಶಸ್ತಿ ಕೇವಲ ಕಾಗದದ ಚೂರು ಎಂಬ ಸತ್ಯವನ್ನು ಜಾನಕಿಯಮ್ಮ ಸ್ಪಷ್ಟವಾಗಿ ಧ್ವನಿಸಿದ್ದರು.



ಜಾನಕಿಯಮ್ಮ ಪದ್ಮ ಭೂಷಣ ಪ್ರಶಸ್ತಿಯನ್ನು ಬೇಡ ಎಂದಿದ್ದು ಯಾಕೆ ಸುದ್ದಿಯಾಗಲಿಲ್ಲ? ಪಡೆಯುವ ಮುನ್ನ ವಿನಯದಿಂದಲೇ ಬೇಡ ಎಂದಿದ್ದರು, ಅದಕ್ಕೆ. ಪಡೆದಿದ್ದನ್ನು ಹಿಂತಿರುಗಿಸಿದರೆ ಮಾತ್ರ ವ್ಯವಸ್ಥೆಯ ಅಹಮಿಗೆ ಪೆಟ್ಟು ಬೀಳುತ್ತದೆ. ಕೊಡುವ ಮುನ್ನವೇ ಎಷ್ಟು ಬೇಕಾದರೂ ಬೇಡ ಅನ್ನಿ. ಎದೆ ಮುಟ್ಟಿ ನೋಡಿಕೊಳ್ಳುವುದು ಹೋಗಲಿ, ವ್ಯವಸ್ಥೆ ಅದನ್ನು ಕಿವಿಗೇ ಹಾಕಿಕೊಳ್ಳುವುದಿಲ್ಲ! ಇಲ್ಲದಿದ್ದರೆ ಅದು ನಡೆದ ಹದಿಮೂರು ವರುಷಗಳ ಉದ್ದಕ್ಕೂ ದಕ್ಷಿಣದ ಕೋಗಿಲೆಗೆ ಭಾರತರತ್ನ ಕೊಟ್ಟು ಪುರಸ್ಕರಿಸುವ ಪ್ರಸ್ತಾಪವೇ ಬರಲಿಲ್ಲವೇ!





ಯಾಕೆಂದರೆ ಜಾನಕಿಯಮ್ಮನ ಪ್ರತಿಭಟನೆಗೆ ಕಣ್ಣು ಸೆಳೆಯುವ ದೃಶ್ಯವೈಭವದ ಗುಣವಿರಲಿಲ್ಲ. ಅದೊಂದು ಸಂಖ್ಯಾಬಲವೂ ಇಲ್ಲದೆ ಉಳಿದ ಒಂಟಿದನಿ. ಹಾಗಾಗಿ ಹೆಣ್ಣೊಬ್ಬಳು ಗೊಣಗೊಣವೆಂದು ಅಡಿಗೆಮನೆಯ ಮೂಲೆಯಲ್ಲೆಲ್ಲೋ ಅತ್ತು ಕಣ್ಣೊರೆಸಿಕೊಂಡಂತೆ ತೋರಿ ನಡುಮನೆಯಲ್ಲಿ ಹರಡಿ ಕೂತಿದ್ದ ಯಜಮಾನ ಮಂದಿ ತಲೆ ಕೆಡಿಸಿಕೊಳ್ಳಲಿಲ್ಲ.

ನಿಮ್ಮ ದಮನಕ್ಕೆ ನಮ್ಮ ಸತ್ಯಾಗ್ರಹವೇ ಉತ್ತರ!

ಹೊರಗಿರಿಸುವಿಕೆ ಮತ್ತು ಉಸಿರನ್ನು ಅಡಗಿಸಿ ಅಳಿಸಿ ಹಾಕುವಿಕೆ ಎಂಬ ಪ್ರಕ್ರಿಯೆಗಳು ವ್ಯವಸ್ಥೆ ಎಂಬ ಶಕ್ತಿ ನಡೆಸುವ ದಮನದ ಎರಡು ಮಾದರಿಗಳು ಎನ್ನುವುದನ್ನು ಗಮನಿಸುವುದು ಅತ್ಯಗತ್ಯ.

2013ರ ಆಗಸ್ಟ್ 20ರಂದು ಪ್ರಗತಿಪರ ಮರಾಠಿ ಲೇಖಕ ನರೇಂದ್ರ ದಾಭೋಲ್ಕರ್ ಬೆಳಗಿನ ವಾಕಿಂಗೆಂದು ಹೋಗಿದ್ದಾಗ ಇಬ್ಬರು ಅಪರಿಚಿತರನ್ನು ಮಂದಿ ಎದುರಾಗಿ ಧಾಭೋಲ್ಕರರನ್ನು ಗುಂಡಿಕ್ಕಿ ಸಾಯಿಸಿದ್ದರು. ಯಾಕೆ? ಪ್ರಗತಿಪರ ಲೇಖಕ ದೇಶದಾದ್ಯಂತ ಹಬ್ಬಿದ್ದ ಮೂಢನಂಬಿಕೆಯ ಹುನ್ನಾರವನ್ನು ಖಂಡಿಸುತ್ತಲೇ ಬಂದಿದ್ದರು, ಅದಕ್ಕೆ. ಹಾಗೆಯೇ 2015ರ ಫೆಬ್ರವರಿ 20ರಂದು ಬರಹಗಾರ ಮತ್ತು ರಾಜಕಾರಣಿ ಗೋವಿಂದ್ ಪನ್ಸಾರೆಯ ವರನ್ನು ಅವರ ಪತ್ನಿಯ ಸಮೇತ ಧಾಬೋಲ್ಕರರ ತರವೇ ಗುಂಡಿಕ್ಕಿ ಕೊಲ್ಲಲಾಯಿತು. ಮುಂದುವರಿದು 2015ರ ಆಗಸ್ಟ್ 30ರಂದು ಕನ್ನಡದ ಒಬ್ಬ ಅತ್ಯುತ್ತಮ ಸಂಶೋಧಕ ಮತ್ತು ಚಿಂತಕ ಡಾ. ಎಂ. ಎಂ. ಕಲಬುರ್ಗಿಯವರನ್ನು ಅವರ ಮನೆಗೆ ಹೋಗಿ ರಾಜಾರೋಷವಾಗಿ ಗುಂಡಿಕ್ಕಿ ಕೊಲ್ಲಲಾಯಿತು. ಮೂಢನಂಬಿಕೆಯ ವಿರುದ್ಧ ಸಮರವನ್ನೇ ಸಾರಿದ್ದ ಕಲಬುರ್ಗಿಯವರ ಸಂಶೋಧನೆ ವ್ಯವಸ್ಥೆಗೆ ಬೇಕಿಲ್ಲದ ಕೆಲವು ಕಹಿ ಸತ್ಯಗಳನ್ನು ಅನಾವರಣ ಮಾಡಿತ್ತು.

ಹೀಗೆ ಪ್ರಗತಿಪರ ಚಿಂತಕರ ಬೇಟೆ ಹೀಗೆ ಸಾಗುತ್ತಿದ್ದಾಗ 2015ರ ಸೆಪ್ಟೆಂಬರ್ 4ರಂದು ಪ್ರಶಸ್ತಿಗಳನ್ನು ಹಿಂತಿರುಗಿಸುವ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಸತ್ಯಾಗ್ರಹ ಪ್ರಾರಂಭವಾಯಿತು. ಮೊಟ್ಟ ಮೊದಲ ಹೆಸರು ಹಿಂದಿ ಲೇಖಕ ಉದಯ್ ಪ್ರಕಾಶ್ ಅವರು. ನಂತರ ಇಂಗ್ಲಿಷ್ ಕಾದಂಬರಿಕಾರ್ತಿ ನಯನತಾರ ಸೆಹಗಲ್ ಹಾಗೂ ಹಿಂದಿ ಕವಿ ಅಶೋಕ್ ವಾಜಪೇಯಿ ಅವರನ್ನು ಹಿಂಬಾಲಿಸಿದ್ದರು.

ನಂತರ 2015ರ ಸೆಪ್ಟೆಂಬರ್ 28ರಂದು ದಾದ್ರಿಯಲ್ಲಿ ದನದ ಮಾಂಸ ತಿಂದನೆಂಬ ಗುಮಾನಿಯ ಮೇಲೆ ವ್ಯಕ್ತಿಯೊಬ್ಬನನ್ನು ಘೋರವಾಗಿ ಥಳಿಸಿ ಕೊಲ್ಲಲಾಯಿತು. ದೇಶದಾದ್ಯಂತ ಹಬ್ಬುತ್ತಿದ್ದ ಭಯಗ್ರಸ್ತ ವಾತಾವರಣದ ಹಿಂದಿರುವ ಶಕ್ತಿಗಳನ್ನು ಖಂಡಿಸಿ ಸಾಹಿತ್ಯವಲಯಕ್ಕೆ ಸೇರಿದ ಹಲವಾರು ಮಂದಿ ತಮ್ಮ ಪ್ರಶಸ್ತಿಗಳನ್ನು ಹಿಂತಿರುಗಿಸುವುದರ ಮೂಲಕ ಪ್ರತಿಭಟನೆಯ ದನಿ ಎತ್ತಿದ್ದರು.

ಇದು ಅಂತಾರಾಷ್ಟ್ರೀಯ ಗಮನವನ್ನು ಸೆಳೆಯಹತ್ತಿದಾಗ ದೇಶಪ್ರೇಮಿಗಳು ಸುಮ್ಮನಿರುತ್ತಾರೆಯೇ? ಅನುಪಮ್ ಖೇರ್ ಎಂಬ ಸಿನಿಮಾ ವ್ಯಕ್ತಿ ಎಲ್ಲ ದೇಶಗಳಲ್ಲಿಯೂ ಸಮಸ್ಯೆಗಳಿರುತ್ತವೆ, ಹಾಗಂತ ಭಾರತ ಸಹನೆ-ಹೀನ ರಾಷ್ಟ್ರ ಎಂದು ಕರೆಯುವುದು ಸರಿಯೇ? ಈ ಪ್ರಶಸ್ತಿ ಹಿಂತಿರುಗಿಸುವ ಚಳುವಳಿಯ ಹಿಂದೆ ರಾಜಕೀಯ ಪ್ರೇರಿತ ದುರುದ್ದೇಶವಿದೆ ಎಂದೆಲ್ಲಾ ಬೊಬ್ಬೆ ಹೊಡೆಯಹತ್ತಿದ್ದು ಸುದ್ದಿಯಾಯಿತು. ಒಬ್ಬರಾದ ಮೇಲೊಬ್ಬರಂತೆ ಗಣ್ಯವ್ಯಕ್ತಿಗಳ ಹತ್ಯೆ ರಾಜಕೀಯ ಬಲವಿಲ್ಲದೆ ಆಗಬಲ್ಲುದೇ? ಅಥವಾ ಆತನ ಬೊಬ್ಬೆಗೆ ರಾಜಕೀಯ ಕುಮ್ಮಕ್ಕು ಇರದಿರಲು ಸಾಧ್ಯವೇ ಎಂಬ ಪ್ರಶ್ನೆಗಳು ಇಲ್ಲಿ ಅಪ್ರಸ್ತುತ.

ಇರಲಿ, ತಣ್ಣಗೆ ಪ್ರಶಸ್ತಿಗಳನ್ನು ಹಿಂತಿರುಗಿಸಿದ ಪ್ರತಿಭಾವಂತರು ಯಾರ್ಯಾರದೋ ನಿದ್ದೆ ಕೆಡಿಸಿದ್ದು ಮಾತ್ರ ಸುಳ್ಳಲ್ಲ. 2010ರಲ್ಲಿ ಎಂ ಎಫ್ ಹುಸೇನರು ದೇಶಭ್ರಷ್ಟರಾಗಬೇಕಾದ ಕಾಲದಲ್ಲಿ ಯಾಕೆ ಪ್ರಶಸ್ತಿಗಳನ್ನು ಹಿಂತಿರುಗಿಸಲಿಲ್ಲ? 1984ರಲ್ಲಿ ಸಿಖ್ ಮಾರಣಹೋಮ ನಡೆದಾಗ ಕಾಂಗ್ರೆಸ್ ವಿರುದ್ಧ ಪ್ರತಿಭಟನೆಯ ದನಿ ಎತ್ತಿ ಪ್ರಶಸ್ತಿಗಳನ್ನು ಯಾಕೆ ಹಿಂತಿರುಗಿಸಲಿಲ್ಲ ಎಂದು ಅಬ್ಬರಿಸಲಾಯಿತು. ಇದು ಅಕ್ಷರಶಃ ಸೇರಿಗೆ ಸವ್ವಾಸೇರು ಎಂಬ ಬೀದಿ ಜಗಳ. ನೀವು ಅದು ಮಾಡಲಿಲ್ಲವಾ? ಇದು ಮಾಡಲಿಲ್ಲವಾ? ಈಗ ನಮ್ಮ ಕಾಲ. ಮಾಡುತ್ತೇವೆ ಬಿಡಿ, ತೆಪ್ಪಗಿರುವುದನ್ನು ಕಲಿಯಿರಿ! ದೇಶಪ್ರೇಮವೆಂದರೆ ಅದೇ!

ಅಂದ ಹಾಗೆ ಬುದ್ಧಿಜೀವಿಗಳ ಪ್ರತಿಭಟನೆಗೆ ಕ್ಯಾರೆ ಎನ್ನದೆ ಸರಣಿಹತ್ಯೆ ಮುಂದುವರಿದು 2017ರ ಸೆಪ್ಟೆಂಬರ್ 5ರಂದು ದಿಟ್ಟ ಪತ್ರಕರ್ತೆ ಗೌರಿ ಲಂಕೇಶರ ಹತ್ಯೆಯಾಗುವುದಂತೂ ತಪ್ಪಲಿಲ್ಲ.

ಇಂದಿನ ನಮ್ಮ ದಿನಗಳಲ್ಲಿ ಒಂದೋ ಹೊರಗಿರಿಸುವ, ಇಲ್ಲಾ ಉಸಿರನ್ನು ಅಡಗಿಸಿ ಅಳಿಸಿ ಹಾಕುವ ಪ್ರಯತ್ನಗಳೆರಡೂ ಬಿಡುವಿಲ್ಲದೆ ನಡೆದಿವೆ ಎನ್ನುವುದಂತೂ ಸ್ಪಷ್ಟ. ಆದ್ರೆ ಲೋರ್ಡ್ ಎಂಬ ಆಫ್ರಿಕನ್ ಅಮೆರಿಕನ್ ಬರಹಗಾರ್ತಿಯ ನಮ್ಮಲ್ಲಿ ಕೆಲವರು ಬದುಕಿ ಉಳಿಯಲು ಹುಟ್ಟಿದವರಲ್ಲ ಎಂಬ ಸುಪ್ರಸಿದ್ಧ ಕೃತಿಯಲ್ಲಿ ಅದೇ ವಾಕ್ಯವೂ ಬರುತ್ತದೆ. ಬದುಕುಳಿದು ಕಣ್ಣೆದುರು ಇರುವುದೇ ಒಂದು ಮಹಾ ಪ್ರತಿಭಟನೆ. ಅದರ ಶಕ್ತಿಯ ಅರಿವು ಇರುವುದರಿಂದಲೇ ದಮನ ಶಕ್ತಿಗಳು ಅಕ್ಷರಶಃ ಉಸಿರನ್ನು ಅಡಗಿಸಲು ಹುನ್ನಾರ ನಡೆಸುತ್ತವೆ. ಆದರೆ ಒಂದನ್ನಂತೂ ಮರೆಯಬಾರದು: ಪ್ರಶಸ್ತಿ ಪತ್ರಗಳನ್ನು ಹಿಂತಿರುಗಿಸುವುದು ಸತ್ಯಾಗ್ರಹದ ಒಂದು ಭಾಗವಾದಂತೆ ಪ್ರಶಸ್ತಿಯನ್ನು ನಿರಾಕರಿಸುವುದು ಸಹ ಅದರದ್ದೇ ಇನ್ನೊಂದು ರೂಪ.


ಸತ್ಯಕ್ಕಾಗಿ ಆಗ್ರಹಿಸಿ ಹೊಮ್ಮುವ ಪ್ರತಿಭಟನೆ ಸತ್ಯಾಗ್ರಹ ಎಂದು ಕರೆಯಲ್ಪಡುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಹೆಂಗಸರನ್ನು ಒಳಗೊಂಡು ನಡೆಸಿದ ಹೋರಾಟದ ಮೂಲಕ ಗಾಂಧೀಜಿಗೆ ಅತ್ಯಂತ ಸಮರ್ಥ ಸತ್ಯಾಗ್ರಹಿ ಹೆಣ್ಣೇ ಎನ್ನುವುದು ಅನುಭವಕ್ಕೆ ಬಂದಿತ್ತು. ಸರ್ದಾರ್ ವಲ್ಲಭಭಾಯಿ ಪಟೇಲರು ಸಹ ಹೆಣ್ಣಿನ ಆತ್ಮಶಕ್ತಿ ಗಂಡಸಿಗಿಂತಲೂ ಮಿಗಿಲು ಎಂದು ಹೇಳಿದ್ದಿದೆ. ಅಹಿಂಸೆ ಎಂಬ ಗುಣ ಬದುಕಿನ ಮೂಲತತ್ವವಾದಲ್ಲಿ ಭವಿಷ್ಯವೆನ್ನುವುದು ಹೆಣ್ಣಿಗೇ ಸೇರಿದ್ದು ಎಂಬ ಗಾಂಧಿನುಡಿ ಈಗ ಪರಿಚಿತವೇ.

ಹೆಣ್ಣಿಗೆ ಚಿನ್ನದ ಮೋಹ ಬಹಳ ಎನ್ನುವ ಮಾತನ್ನು ಸುಳ್ಳು ಮಾಡಿದವರು ತಮ್ಮಲ್ಲಿದ್ದಷ್ಟೂ ಚಿನ್ನವನ್ನು ದಾನಮಾಡಿದ ಹೆಂಗಸರೇ. ಗಾಂಧೀಜಿ ತಮ್ಮ ನವಜೀವನ ಪತ್ರಿಕೆಯಲ್ಲಿ ಒಮ್ಮೆ ಹೀಗೆ ದಾಖಲಿಸಿದ್ದರು:

ಡಾಕೊರ್ ಊರಿನಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಹಣ ಕೊಡಿರೆಂದು ಮಂದಿಯನ್ನು ಬೇಡಿದೆ. ಸದ್ಯ ಹೆಂಗಸರ ಕಡೆಯಿಂದಲೇ ಶುರು ಮಾಡಿದ್ದೆ. ಅವರಲ್ಲೊಬ್ಬ ಸಹೋದರಿ ಕಂಡವರ ಮನೆಗಳ ಹಿಟ್ಟು ಬೀಸಿ ಮಾಡಿಸಿಕೊಂಡಿದ್ದ ಪುಡಿ ಚಿನ್ನವನ್ನು ದಾನ ಮಾಡಿದಳು. ಆಕೆ ಕಿವಿಯ ವಾಲೆಯನ್ನು ಬಿಚ್ಚಿ ನನ್ನ ಕೈಗಿತ್ತ ಗಳಿಗೆಯಲ್ಲಿ ಭಾರತೀಯ ಹೆಣ್ಮಕ್ಕಳು ಅಹಿಂಸೆ ಮತ್ತು ಅಸಹಕಾರಗಳ ಅರ್ಥವನ್ನು ಆತ್ಮದೊಳಕ್ಕೆ ಇಳಿಸಿಕೊಂಡಿರುವುದು ನನಗೆ ಝುಗಝುಗನೆ ಹೊಳೆದಿತ್ತು. ಬರಬರುತ್ತಾ ಅದು ಇನ್ನಷ್ಟು ಸ್ಪಷ್ಟವಾಗುತ್ತಾ ಹೋಯಿತು. ಗುಜರಾತಿನಲ್ಲಿ ಹೆಣ್ಮಕ್ಕಳು ಬಳೆ, ವಾಲೆ, ಉಂಗುರ, ಸರ, ಇತ್ಯಾದಿ ಏನೇನಿತ್ತು ಎಲ್ಲವನ್ನೂ ಬಿಚ್ಚಿ ಕೊಟ್ಟರು. ಪೂನಾದಲ್ಲಿ ಆಭರಣಗಳ ಸುರಿಮಳೆಯೇ ನಡೆಯಿತು. ಬೆಳಗಾಂ, ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲೂ ಸಹ ಅದು ಮುಂದುವರೆಯಿತು. ಪರ್ದಾ ಹಿಂದೆ ಮರೆಯಾಗಿದ್ದ ಮುಸ್ಲಿಂ ಹೆಂಗಸರು ಒಡವೆ ಮತ್ತು ನಗದು ಹಣವನ್ನು ಕೊಡುವುದರಲ್ಲಿ ಹಿಂದೆ ಬೀಳಲಿಲ್ಲ.

ಇಷ್ಟಾದರೂ ಉಪ್ಪಿನ ಸತ್ಯಾಗ್ರಹದಲ್ಲಿ ಗಾಂಧೀಜಿಯವರೊಂದಿಗೆ ದಂಡಿಯತ್ತ ನಡೆದ ಸತ್ಯಾಗ್ರಹಿಗಳಲ್ಲಿ ಮೊದಮೊದಲು ಒಬ್ಬ ಹೆಣ್ಣೂ ಇರಲಿಲ್ಲ. ಆದರೆ ಅಷ್ಟರಹೊತ್ತಿಗೆ ವಿದೇಶಿ ವಸ್ತ್ರಗಳನ್ನು ಮಾರುವ ಅಂಗಡಿಗಳ ಸುತ್ತ ಪಿಕೆಟಿಂಗ್ ನಡೆಸುವುದು, ಸಾರಾಯಿ ಅಂಗಡಿಗಳ ಮುಂದೆ ನಡೆದ ಪ್ರತಿಭಟನೆ, ಬೀದಿಯಲ್ಲಿ ನಿಂತು ಉಪ್ಪು ಮಾರುವುದು, ಹರತಾಳಗಳನ್ನು ನಿಯೋಜಿಸಿ ಯಶಸ್ವಿಯಾಗಿ ನಡೆಸುವುದು, ಪೊಲೀಸರ ಲಾಠಿ, ಗುಂಡುಗಳನ್ನು ಧೈರ್ಯದಿಂದ ಎದುರಿಸುವುದು, ಕಠಿಣ ಶಿಕ್ಷೆಗೆ ಹೆದರದೆ ಜೈಲುವಾಸ ಅನುಭವಿಸುವುದು ಇತ್ಯಾದಿ ಎಲ್ಲದರಲ್ಲೂ ಹೆಂಗಸರ ಪಾಲಿತ್ತು. ಆದರೂ ಉಪ್ಪಿನ ಸತ್ಯಾಗ್ರಹ ಗಂಡಿಗೆ ಮಾತ್ರ ಮೀಸಲು ಎಂದು ಗಾಂಧೀಜಿ ಭಾವಿಸಿದ್ದರೆ? ಈ ಹೊರಗಿರಿಸುವ ವಿದ್ಯಮಾನಕ್ಕೆ ಹೆಂಗಸರು ಹೇಗೆ ಪ್ರತಿಕ್ರಿಯಿಸಿದರು?

ಅವರೇನೂ ತೆಪ್ಪಗೆ ಅದನ್ನು ಒಪ್ಪಿಕೊಳ್ಳಲಿಲ್ಲ. ತಮ್ಮಲ್ಲಿ ಜಾಗೃತವಾಗಿರುವ ಆಧುನಿಕ ಮಹಿಳಾಪ್ರಜ್ಞೆಗೆ ನೀವು ಅಪಚಾರ ಮಾಡುತ್ತಿದ್ದೀರಿ ಎಂದು ಗಾಂಧೀಜಿಯವರನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು. ಯಾವ ಚಳುವಳಿಯೂ ತಾವಿಲ್ಲದೆ ನಡೆಯಕೂಡದು ಎಂದು ಸ್ಪಷ್ಟವಾಗಿ ಹೇಳಿದರು. ದಾದಾಬಾಯಿ ನವರೋಜಿಯವರ ಮೊಮ್ಮಗಳು ಕುರ್ಷೆದ್ ಬೆನ್ ನವರೋಜಿ ಒಂದು ಸಿಟ್ಟಿನ ಪತ್ರವನ್ನು ಸಹ ಬರೆದು ಗಾಂಧಿಗೆ ರವಾನಿಸಿದರು. ಸ್ತ್ರೀಧರ್ಮ ಎಂಬ ಪತ್ರಿಕೆಯಲ್ಲಿ ಮಾರ್ಗರೆಟ್ ಕಸಿನ್ಸ್ ಹೀಗೆ ಹೊರಗಿರಿಸುವ ಹುನ್ನಾರವನ್ನು ಪ್ರತಿಭಟಿಸಿದರು. ಯಾವುದೇ ಸಮಾವೇಶ, ಸಮಿತಿ, ಸಂಚಲನೆಗಳು ಹೆಣ್ಣಿಲ್ಲದೆ ನಡೆಯಬಾರದೋ, ಹಾಗೆಯೇ ಯಾವುದೇ ಹೋರಾಟ, ಪ್ರತಿಭಟನೆಗಳು ಸಹ ಹೆಣ್ಣಿಲ್ಲದೆ ಅಪೂರ್ಣ ಎಂದು



ಎಚ್ಚರಿಸಿದರು.

ನಮ್ಮ ನಾಡಿನವರೇ ಆದ ಕಮಲಾಬಾಯಿ ಚಟ್ಟೋಪಾಧ್ಯಾಯರು ತಕ್ಷಣ ಸೂರತ್ ಪಟ್ಟಣಕ್ಕೆ ಧಾವಿಸಿ ಗಾಂಧೀಜಿಯವರನ್ನು ಭೇಟಿ ಮಾಡಿ ಹೆಣ್ಣು ಪಿಕೆಟಿಂಗ್, ಹರತಾಳ, ಇತ್ಯಾದಿಗಳಷ್ಟೇ ಅಲ್ಲ, ಆಕೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೆಡ್ಡು ಹೊಡೆದು ನಿಂತು ಉಪ್ಪು ತಯಾರಿಸುವ ಹೋರಾಟದಲ್ಲಿ ಸಹ ಭಾಗಿಯಾಗಲು ಅಷ್ಟೇ ಶಕ್ತಳು ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದಾಗ ಗಾಂಧೀಜಿ ಒಪ್ಪಿ, ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ಇಚ್ಛೆ ಇರುವ ಪ್ರತಿಯೊಬ್ಬರಿಗೂ ಸ್ವಾಗತ ಎಂಬ ಹೇಳಿಕೆಯನ್ನು ಬರಹದಲ್ಲಿ ನೀಡಿದ್ದರು.


ಅಲ್ಲಿ ಹೊರಗಿರಿಸುವ ವಿದ್ಯಮಾನದಲ್ಲಿ ಹೆಣ್ಣು ಗಂಡು ಎಂಬ ಅಂತರಪ್ರಜ್ಞೆ ಕೆಲಸ ಮಾಡಿತ್ತು. ನೂರಾರು ಮೈಲಿಗಳು ನಡೆಯಬೇಕಾದ ಈ ಸತ್ಯಾಗ್ರಹದಲ್ಲಿ ಮನೆಯನ್ನು ನಿಭಾಯಿಸುವ ಹೆಣ್ಣು ಪಾಲ್ಗೊಳ್ಳಬಲ್ಲಳೇ ಎಂಬ ಆತಂಕವಿದ್ದಿರಲು ಸಾಧ್ಯ. ಆದರೆ ಹಿಂದಿಯಲ್ಲಿ ಹಾಡಿದ ಮಾತ್ರಕ್ಕೆ ಸಮಗ್ರ ರಾಷ್ಟ್ರದ ರತ್ನವಾಗಿಸುವ, ಆದರೆ ಎಷ್ಟೋ ಭಾಷೆಗಳಲ್ಲಿ ಹಾಡಿದ ಜಾನಕಿಯಮ್ಮರನ್ನು ದಕ್ಷಿಣಕ್ಕೆ ಮಾತ್ರ ಸೀಮಿತಗೊಳಿಸುವ ಪೂರ್ವಗ್ರಹದ ಹಿಂದೆ ಯಾವ ರೀತಿಯ ಸಮರ್ಥನೆ ಇರಲು ಸಾಧ್ಯ?

ನಿಮ್ಮ ಪದ್ಮ-ಗಿದ್ಮ ಬೇಡ. ಹಾಗೆಯೇ ಸತ್ತ ಮೇಲೆ ನೀವು ಕೊಡಬಹುದಾದ ಭಾರತರತ್ನವೂ ಬೇಡ ಎಂದು ಸ್ಪಷ್ಟಪಡಿಸಿದ್ದ ಜಾನಕಿಯಮ್ಮನವರ ಸತ್ಯಾಗ್ರಹಕ್ಕೆ ಒಂದು ಸಲಾಂ!

**– ಸುಕನ್ಯಾ** ಕನಾರಳ್ಳಿ

# ಕಾಂಬಿ ಆಫರ್‌ಗಳ ಹಿಂದಿದೆ ಪಿತೂರಿ

> ಈ ಕಾಳುಗಳನ್ನು ಬಿಸಿ ಮಾಡುತ್ತೀರಲ್ಲ ಆಗ ಒಳಗಿನ ನೀರು ಬಿಸಿ ಯಾಗುತ್ತದೆ. ಹಿಗ್ಗುತ್ತದೆ. ಆದರೆ ಕಠಿಣವಾದ ಸಿಪ್ಪೆ ಇದನ್ನು ಹೊರ ಹೋಗಲು ಬಿಡುವುದಿಲ್ಲ. ಅಂದರೆ ಪ್ರತಿಯೊಂದು ಜೋಳದ ಕಾಳು ಒಂದು ಸಣ್ಣ ಪ್ರೆಶರ್ ಕುಕ್ಕರ್‌ನಂತೆ ವರ್ತಿಸುತ್ತದೆ.



ಮೊನ್ನೆ ಮೊಮ್ಮಗನೊಂದಿಗೆ ಒಂದು ಮಾಲ್‌ಗೆ ಹೋಗಿದ್ದೆ. ಎಲ್ಲ ಸುತ್ತಿದ ಮೇಲೆ ಹೊರಗಡೆ ಬಂದೆವು. ಅಲ್ಲಿ ಹೊರಗಡೆ ಇರುವ ಸಿಡಿಯುವ ಪಾಪ್ ಕಾರ್ನ್ ನೋಡಿದವನು ನನ್ನನ್ನು ಅಲ್ಲಿಗೆ ಎಳೆದುಕೊಂಡು ಹೋದ. ಅದು ಸಿಡಿಯುವುದನ್ನು ಅದು ಹೇಗೆ ಸಿಡಿಯುತ್ತದೆ ಎಂದು ಕೇಳಿದ. ನಾವೂ ಮನೆಗೆ ಹೋಗಿ ಮಾಡೋಣ ಎಂದೆ. ಅವನನ್ನು ಅವನ ಅಮ್ಮನೊಂದಿಗೆ ಕೂರಿಸಿ ಒಳಗಡೆ ಹೋಗಿ ಒಂದು ಪ್ಯಾಕೆಟ್ ಪಾಪ್ ಕಾರ್ನ್ ತಂದೆ. ಮನೆಗೆ ಬಂದ ಕೂಡಲೇ ಪಾಪ್ ಕಾರ್ನ್ ಮಾಡು ಎಂದು ಹಠ ಹಿಡಿದ. ಒಂದು ಕುಕರ್ ಇಟ್ಟು ಪಾಪ್ ಕಾರ್ನ್ ಕಾಳುಗಳನ್ನು ಹಾಕಿದೆ. ಆ ಕಾಳುಗಳು ಸಿಡಿಯುವುದನ್ನು ಅಚ್ಚರಿಯಿಂದ ನೋಡಿದ. ಖುಷಿಯಿಂದ ಕುಣಿದ. ಅಜ್ಜ ಇಷ್ಟು ದೊಡ್ಡದಾಗುವುದು ಹೇಗೆ..? ಎಂದು ಕೇಳಿದ. ಅವನಿಗೆ ಅರ್ಥವಾಗುವುದಿಲ್ಲ, ಆದ್ದರಿಂದ ಏನೋ ಒಂದು ಕಾರಣ ಹೇಳಿದೆ. ಆದರೆ ನಿಮ್ಮನ್ನೂ ಈ ಪ್ರಶ್ನೆ ಕಾಡಿರಬಹುದಲ್ಲವೇ..?

ಮುಸುಕಿನ ಜೋಳದ ಕಾಳುಗಳಿಂದ ಪಾಪ್ ಕಾರ್ನ್ ತಯಾರಿಸುತ್ತೇವೆ. ಆದರೆ ನಮ್ಮ ರೈತರು ಇದಕ್ಕಾಗಿಯೇ ಒಂದು ಪ್ರತ್ಯೇಕ ಜಾತಿಯ ಜೋಳವನ್ನು ತಮಗೆ ಬೇಕಾಗುವಷ್ಟು ಬೆಳೆದುಕೊಳ್ಳುತ್ತಾರೆ. ನಾವು ಜನ್ಮಾಷ್ಟಮಿ ಬಂತೆಂದರೆ ಬತ್ತದಿಂದ ಅರಳು ಮಾಡುತ್ತೇವಲ್ಲವೆ ಅವು ಪಾಪ್ ಕಾರ್ನ್‌ನ ತಮ್ಮಂದಿರು ಅಷ್ಟೇ.


ನಾವು ಬಳಸುವ ಜೋಳದ ಕಾಳುಗಳಿವೆಯಲ್ಲ ಅವುಗಳು ಆವೃತ್ತ ಬೀಜಗಳು. ಇವುಗಳ ಸುತ್ತ ಎರಡು ಕೋಟೆಗಳಿರುತ್ತವೆ. ಇವುಗಳು ಬೀಜ ಪೊರೆಗಳು. ಹೊರಗಿನದ್ದು ಕಠಿಣವಾದ ಟೆಸ್ಟಾ. ಬಿಸಿಲು, ಒಣಹವೆ, ಕೀಟಗಳು ಮತ್ತು ಇತರ ಆಘಾತಗಳಿಂದ ಬೀಜಗಳನ್ನು ರಕ್ಷಿಸುತ್ತದೆ. ಟೆಸ್ಟಾದ ಒಳಗಿರುವುದು ತೆಳುವಾದ ಟೆಗ್ಮಾ. ಇದು ಒಳಗಿರುವ ಭ್ರೂಣವನ್ನು ರಕ್ಷಿಸುತ್ತದೆ. ಜೋಳದ ಕಾಳಿನ ಹೊರಗಿರುವ ಕಠಿಣವಾದ ಅಬೇಧ್ಯ ಟೆಸ್ಟಾ ಎನ್ನುವ ಮಂತ್ರದಂಡವೇ ನಿಮ್ಮ ಪಾಪ್ ಕಾರ್ನ್ ತಯಾರಿಸುವುದು ಎನ್ನುವುದು ನಿಮಗೆ ಗೊತ್ತಾ.

ಬೀಜಗಳು ಎಷ್ಟೇ ಒಣಗಿದ್ದರೂ 13% ದಷ್ಟು ತೇವಾಂಶ ಹೊಂದಿರುತ್ತವೆ. ಈ ತೇವಾಂಶದಲ್ಲಿ ಕಾಳುಗಳು ಮೊಳಕೆಯೊಡೆಯುವುದಿಲ್ಲ. ಇದನ್ನು ಸುಪ್ತಾವಸ್ಥೆ ಎನ್ನುವುದು. ಈ ಕಾಳುಗಳನ್ನು ಬಿಸಿ ಮಾಡುತ್ತೀರಲ್ಲ ಆಗ ಒಳಗಿನ ನೀರು ಬಿಸಿಯಾಗುತ್ತದೆ. ಹಿಗ್ಗುತ್ತದೆ. ಆದರೆ ಕಠಿಣವಾದ ಸಿಪ್ಪೆ ಇದನ್ನು ಹೊರ ಹೋಗಲು ಬಿಡುವುದಿಲ್ಲ. ಅಂದರೆ ಪ್ರತಿಯೊಂದು ಜೋಳದ ಕಾಳು ಒಂದು ಸಣ್ಣ ಪ್ರೆಶರ್ ಕುಕ್ಕರ್‌ನಂತೆ ವರ್ತಿಸುತ್ತದೆ. ಒತ್ತಡದಲ್ಲಿರುವ ಈ ಬಿಸಿ ಹಬೆ ನೀರಿನಲ್ಲಿ ಕರಗದ ಪಿಷ್ಟದ ಹರಳುಗಳೊಂದಿಗೆ ವರ್ತಿಸಿ ಮೃದುವಾದ ಜೆಲ್ ನಂತಹ ಅಧಿಕ ಗಾತ್ರದ ಮೃದುವಾದ ಸ್ಥಿತಿಸ್ಥಾಪಕ ಗುಣವುಳ್ಳ ಜಿಲೆಟಿನೈಸ್ಡ್ ಪಿಷ್ಟವಾಗಿ ಬದಲಾಯಿಸುತ್ತದೆ. ಇನ್ನೂ ಒತ್ತಡ ತಡೆಯಲಾರೆನೆನ್ನುವಾಗ ಕಾಳು ಒಡೆದು ಪಾಪ್ ಕಾರ್ನ್‌ಗಳು ಅರಳುತ್ತವೆ. ನೀವು ಸೇರಿಸಿದ ಎಣ್ಣೆಯಲ್ಲಿನ ಬಣ್ಣ, ಉಪ್ಪು, ಸಾಂಬಾರು ಪದಾರ್ಥಗಳು ನಿಮ್ಮ ಪಾಪ್ ಕಾರ್ನ್‌ಗೆ ಬಣ್ಣ ಮತ್ತು ರುಚಿಯನ್ನು ಕೊಡುತ್ತವೆ.

ಈ ಪಾಪ್ ಕಾರ್ನ್‌ಗಳು ಸುಲಭವಾಗಿ ಜೀರ್ಣವಾಗುತ್ತವೆ. ಆದ್ದರಿಂದ ಸಕ್ಕರೆ ಒಮ್ಮೆಲೇ ರಕ್ತಕ್ಕೆ ಸೇರುವುದರಿಂದ ರಕ್ತದ ಸಕ್ಕರೆಯ ಮಟ್ಟ ಒಮ್ಮೆಲೇ ಏರುತ್ತದೆ. ಮಿತ ಪ್ರಮಾಣದಲ್ಲಿ ಸೇವಿಸುವುದು ಯಾವುದೇ ಪರಿಣಾಮ ಬೀರುವುದಿಲ್ಲ. ಅಗತ್ಯಕ್ಕಿಂತ ಜಾಸ್ತಿಯಾದರೆ ಅಮೃತವೂ ವಿಷವೆನ್ನುವಂತೆ ಬೊಜ್ಜು ಮತ್ತು ಚಯಾಪಚಯ ಕ್ರಿಯೆಯ ಅಸಮತೋಲನಕ್ಕೆ ಕಾರಣವಾಗಬಹುದು. ಆದ್ದರಿಂದಲೇ ಈಗಿನ ಆಧುನಿಕ ಸಿನಿಮಾ ಮಂದಿರಗಳಲ್ಲಿ ಬಕೆಟ್ ಪಾಪ್ ಕಾರ್ನ್ ಮತ್ತು ಕೋಕ್‌ಗಳ ಕಾಂಬಿ ಆಫರ್ ಇಟ್ಟಿರುತ್ತಾರೆ. ಒಬ್ಬರೇ ಇದ್ದರೆ ಈ ಆಫರ್‌ಗೆ ಹೋಗಬೇಡಿ. ಇದು ಔಷಧಿ ಕಂಪನಿಗಳ ಪಿತೂರಿ. ಏಕೆಂದರೆ ಬಕೆಟ್ ಗಟ್ಟಲೆ ಪಾಪ್ ಕಾರ್ನ್ ನಿಮ್ಮ ಆರೋಗ್ಯ ಹಾಳು ಮಾಡಬಹುದು.

**– ದಿವಾಕರ ಶೆಟ್ಟಿ ಎಚ್,** ಮಂಗಳೂರು


# ಬೆಳಕಿಗೆ ಬಾರದ ಜೀತದ ಕತೆಗಳು ಇನ್ನೆಷ್ಟು?



ಜೀತ ಪದ್ಧತಿ ನಿಷೇಧಗೊಂಡು ಐದು ದಶಕಗಳೇ ಕಳೆದಿದ್ದರೂ, ರಾಜ್ಯದಲ್ಲಿ ಈ ಸಾಮಾಜಿಕ ಪಿಡುಗು ಇನ್ನೂ ಜೀವಂತವಿರುವುದು ಕಳವಳಕಾರಿ ಸಂಗತಿ. ಕಲ್ಲು ಗಣಿಗಾರಿಕೆ, ಇಟ್ಟಿಗೆ ಬಟ್ಟಿ, ಕೃಷಿ ಹಾಗೂ ಹೋಟೆಲ್ ಉದ್ಯಮಗಳಂಥ ಕ್ಷೇತ್ರಗಳಲ್ಲಿ ಜೀತದಾಳುಗಳ ಶೋಷಣೆ ಅವ್ಯಾಹತವಾಗಿ ಮುಂದುವರಿದಿದೆ. ವಿಜಯನಗರ ಜಿಲ್ಲೆಯ ನಂದಿಬಂಡಿ ಗ್ರಾಮದಲ್ಲಿ ಒಡಿಶಾ ಮೂಲದ 37 ಕಾರ್ಮಿಕರನ್ನು ಜೀತಕ್ಕಿಟ್ಟುಕೊಂಡಿದ್ದ ಘಟನೆ ನಾಗರಿಕ ಸಮಾಜವನ್ನು ತಲೆತಗ್ಗಿಸುವಂತೆ ಮಾಡಿತ್ತು. ಸ್ವಯಂ ಸಂಸ್ಥೆಯ ದೂರಿನ ಮೇರೆಗೆ ನಡೆದ ದಾಳಿಯಲ್ಲಿ 10 ಮಕ್ಕಳು ಹಾಗೂ 11 ಮಹಿಳೆಯರನ್ನು ರಕ್ಷಿಸಲಾಗಿತ್ತು. ಇವರನ್ನು ಜೀತದಿಂದ ವಿಮುಕ್ತಿಗೊಳಿಸಿ ತವರೂರಿಗೆ ಕಳುಹಿಸಲಾಗಿತ್ತು. ಈ ಘಟನೆ ಹಸಿಯಾಗಿರುವಾಗಲೇ ಎರಡು ದಿನಗಳ ಹಿಂದೆ ತುಮಕೂರು ಜಿಲ್ಲೆಯಲ್ಲೂ 9 ಜನ ಕಾರ್ಮಿಕರನ್ನು ರಕ್ಷಿಸಲಾಗಿದೆ. ಕಾಲು ಚಾಚಲೂ ಆಗದ ಪುಟ್ಟ ಶೆಡ್‌ಗಳು, ಮೂಲಸೌಕರ್ಯಗಳ ಕೊರತೆ, ಅರೆಬರೆ ಊಟ ಹಾಗೂ ನರಳಾಟದ ಬದುಕು ಈ ನತದೃಷ್ಟರ ನೈಜ ಸ್ಥಿತಿಯನ್ನು ಹೇಳುತ್ತಿವೆ. ಹೊರರಾಜ್ಯ ಹಾಗೂ ಜಿಲ್ಲೆಗಳಿಂದ ಹೆಚ್ಚಿನ ಕೂಲಿಯ ಆಮಿಷವೊಡ್ಡಿ ಕರೆತರುವ ವಂಚಕರು, ಕಾರ್ಮಿಕರನ್ನು ನರಕಯಾತನೆಗೆ ಗುರಿಮಾಡಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಸ್ಥಳೀಯ ಕಾರ್ಮಿಕರಾದರೆ ವಿಷಯ ಹೊರಬೀಳುತ್ತದೆ ಎಂಬ ಭೀತಿಯಿಂದ ಹೊರರಾಜ್ಯದವರನ್ನು ಗುರಿಯಾಗಿಸಲಾಗುತ್ತಿದ್ದು, ಕೊಪ್ಪಳ, ಬಾಗಲಕೋಟೆ, ಮೈಸೂರು, ಬೆಂಗಳೂರು ಹಾಗೂ ಬಳ್ಳಾರಿ ಸೇರಿದಂತೆ ನಾನಾ ಜಿಲ್ಲೆಗಳಲ್ಲಿ ಇಂಥ ಪ್ರಕರಣಗಳು ಆಗಾಗ್ಗೆ ಪತ್ತೆಯಾಗುತ್ತಿರುವುದು ಜೀತ ಪದ್ಧತಿಯ ಕರಾಳ ಮುಖವನ್ನು ಅನಾವರಣಗೊಳಿಸುತ್ತಿವೆ.

ಸರ್ಕಾರವು 1976ರಲ್ಲೇ ಜೀತ ಪದ್ಧತಿ ನಿರ್ಮೂಲನಾ ಕಾಯಿದೆಯನ್ನು ಜಾರಿಗೊಳಿಸಿದ್ದರೂ, ಅಪರಾಧಿಗಳಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಮಾತ್ರ ಅತ್ಯಂತ ವಿರಳವಾಗಿದೆ. ಮಾನವೀಯತೆಗೆ ಕಳಂಕಪ್ರಾಯವಾಗಿರುವ ಈ ಪಿಡುಗನ್ನು ಸಂಪೂರ್ಣವಾಗಿ ಮಟ್ಟಹಾಕಲು ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನ ಅನಿವಾರ್ಯವಾಗಿದೆ. ಅಧಿಕಾರಿಗಳು ದೋಷರಹಿತ ದಾಖಲೆಗಳನ್ನು ಸಿದ್ಧಪಡಿಸಿ, ತ್ವರಿತ ವಿಚಾರಣೆ ನಡೆಸಿ ತಪ್ಪಿತಸ್ಥ ಮಾಲೀಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಕ್ವಾರಿ, ಇಟ್ಟಿಗೆ ಬಟ್ಟಿ ಹಾಗೂ ಹೋಟೆಲ್‌ಗಳಂಥ ಶಂಕಿತ ಪ್ರದೇಶಗಳಲ್ಲಿ ನಿರಂತರ ತಪಾಸಣೆ ಕೈಗೊಂಡು ವಲಸೆ ಕಾರ್ಮಿಕರ ಮೇಲೆ ನಿಗಾ ವಹಿಸುವುದರೊಂದಿಗೆ ಅವರ ನೋಂದಣಿಯನ್ನು ಕಡ್ಡಾಯಗೊಳಿಸಬೇಕು. ಹೊರಗಿನ ಪ್ರಪಂಚ ತಿಳಿಯದಂತೆ ಕಾರ್ಮಿಕರ ಮೇಲೆ ಸೆಕ್ಯೂರಿಟಿಗಳನ್ನು ಕಾವಲಿಡುವ ಅಮಾನವೀಯ ಪ್ರವೃತ್ತಿ ಕೊನೆಗೊಳ್ಳಬೇಕು. ಬಹುತೇಕ ಕಡೆ ವಲಸೆ ಕಾರ್ಮಿಕರೇ ಜೀತದ ಕುಣಿಕೆಗೆ ಸಿಲುಕುತ್ತಿದ್ದು, ಗ್ರಾಮೀಣ ಪ್ರದೇಶದ ಜನರಲ್ಲಿ ಜೀತ ಪದ್ಧತಿಯ ಅನಿಷ್ಟಗಳ ಕುರಿತು ವ್ಯಾಪಕ ಜಾಗೃತಿ ಮೂಡಿಸಬೇಕಿದೆ. ಕೇವಲ ಕಠಿಣ ಕಾನೂನುಗಳನ್ನು ನಂಬಿ ಕುಳಿತರೆ ಸಾಲದು; ನಾನು ಅತ್ತಂತೆ ಮಾಡುವೆ, ನೀನು ಸತ್ತಂತೆ ಮಾಡು ಎನ್ನುವ ಕಣ್ಣಾಮುಚ್ಚಾಲೆ ಆಟ ಮುಂದುವರಿದರೆ ಬಡವರಿಗೆ ನ್ಯಾಯವೆಂಬುದು ಮರೀಚಿಕೆಯಾಗುವುದರಲ್ಲಿ ಸಂದೇಹವಿಲ್ಲ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ, ಪೊಲೀಸ್, ಕಾರ್ಮಿಕ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅಧಿಕಾರಿಗಳ ನಿರಂತರ ಮೇಲ್ವಿಚಾರಣೆ ಹಾಗೂ ಜವಾಬ್ದಾರಿಯುತ ಹೆಜ್ಜೆಗಳಿಂದ ಮಾತ್ರ ಜೀತ ಪದ್ಧತಿಯನ್ನು ಬುಡಸಹಿತ ಕಿತ್ತೆಸೆಯಲು ಮತ್ತು ಸಂಕಷ್ಟದಲ್ಲಿರುವ ಬಡ ಕುಟುಂಬಗಳಿಗೆ ನ್ಯಾಯ ಒದಗಿಸಲು ಸಾಧ್ಯ.

**– ಕೆ.ಪಿ.ಅಶ್ವಿನ್** ರಾವ್



# ಕಾಣಿಸಿದರೆ ಭಾಗ್ಯ, ಕಾಣಿಸದಿದ್ದರೆ ಬೆರಗು!


> ಕಳೆದ ವರ್ಷ ಯಾರೋ ನ್ಯಾಚುರಲಿಸ್ಟ್‌ಗಳು ಮತ್ತು ಬಯಾಲಜಿಸ್ಟ್‌ಗಳು ಸೇರಿ ಅದನ್ನು ಪತ್ತೆ ಮಾಡಿದ್ದರು. ಅದಕ್ಕೆ ಡೊಲೊ ಮಿಡಿಸ್ ಇಂಡಿಕಸ್ ಎಂದು ಹೆಸರು ಕೊಟ್ಟಿದ್ದಾರೆ. ಡೊಲೊಮಿಡಿಸ್ ಕುಲಕ್ಕೆ ಸೇರಿದ ಈ ಜೇಡ ಭಾರತದಲ್ಲಿ ಕಂಡಿರುವುದು ಇದೇ ಮೊದಲ ಬಾರಿ. ಅದರಲ್ಲೂ ಇದು ಭಾರತದಲ್ಲಿ, ಪಶ್ಚಿಮ ಘಟ್ಟದಲ್ಲಿ ಮಾತ್ರ ಕಂಡುಬಂದಿರುವ ಹೊಸ ಜಾತಿ.

ಕಾಡುದಾರಿ ಮಲಯಾಳಂ ಮತ್ತು ಇಂಗ್ಲಿಷ್ ಬೆರೆಸಿ ಮಾತನಾಡುತ್ತಿದ್ದ ಆ ಗಾರ್ಡ್ ವರು ಸಾರೆ, ಐ ವಿಲ್ ಶೋ ಯು ನ್ಯೂ ಸ್ಪೀಶಿಸ್ ಆಫ್ ಸ್ಪೈಡರ್ ಎಂದು ಹೇಳಿದಾಗ ಅಚ್ಚರಿಯೇ ಆಯಿತು. ಕೇರಳದ ವಯನಾಡಿನ ನಡುವಿನ ಕಾಡಿನ ಮೂಲೆಯ ಇರುವ ರೆಸಾರ್ಟು. ಅವರಂದಿಷ್ಟು ಗಾರ್ಡುಗಳು, ನ್ಯಾಚುರಲಿಸ್ಟುಗಳೂ ಹೌದು.

ಸಾಂಪ್ರದಾಯಿಕ ಪುಟ್ಟು ಇತ್ಯಾದಿ ಖಾದ್ಯ ಹೇಗೂ ಆಯ್ತಲ್ಲ. ಈ ನಡುವೆ ಆಸಕ್ತಿ ಮೂಡಿಸಿದ ಆ ವ್ಯಕ್ತಿ ಕಾಡಿನ ನಡುವಿನ ಒಂದು ನೀರಿನ ಮಡುವಿನಲ್ಲಿ ಒಂದು ಜಾತಿಯ ಜೇಡ ಉಂಟೆಂದೂ, ನೀರಿನಲ್ಲಿ ಕ್ರಿಮಿಕೀಟಗಳನ್ನು ಹಿಡಿದು ಭಕ್ಷಿಸುತ್ತದೆ ಎಂದೂ, ಅದು ಹೊಸದಾಗಿ ಸಂಶೋಧನೆ ಆಗಿಂದೂ, ತನ್ನ ಜೊತೆ ಬಂದರೆ ತೋರಿಸುತ್ತೇನೆ ಎಂದೂ ಹೇಳಿಕೊಂಡ. ಗಿಡಮರಗಳ ನಡುವೆ, ಬಂಡೆಗಳ ಸಂದಿಯಲ್ಲಿ ಬಲೆ ಹೆಣೆದು ಬೇಟೆಯಾಡುವ ಜೇಡ ನಮಗೆ ಗೊತ್ತು. ಆದರೆ ನೀರಿನಲ್ಲಿ ಬೇಟೆಯಾಡುವ ಜೇಡ? ಊಹೂಂ ಇದು ಹೊಸ ವಿಷಯವೇ ಸರಿ. ಕುತೂಹಲದಿಂದ ಇಂಟರ್‌ನೆಟ್ ತಡಕಿದರೆ ಅವನು ಹೇಳಿದ್ದು ನಿಜವಿತ್ತು.

ಕಳೆದ ವರ್ಷ ಯಾರೋ ನ್ಯಾಚುರಲಿಸ್ಟ್‌ಗಳು ಮತ್ತು ಬಯಾಲಜಿಸ್ಟ್‌ಗಳು ಸೇರಿ ಅದನ್ನು ಪತ್ತೆ ಮಾಡಿದ್ದರು. ಅದಕ್ಕೆ ಡೊಲೊ ಮಿಡಿಸ್ ಇಂಡಿಕಸ್ ಎಂದು ಹೆಸರು ಕೊಟ್ಟಿದ್ದಾರೆ. ಡೊಲೊಮಿಡಿಸ್ ಕುಲಕ್ಕೆ ಸೇರಿದ ಈ ಜೇಡ ಭಾರತದಲ್ಲಿ ಕಂಡಿರುವುದು ಇದೇ ಮೊದಲ ಬಾರಿ. ಅದರಲ್ಲೂ ಇದು ಭಾರತದಲ್ಲಿ, ಪಶ್ಚಿಮ ಘಟ್ಟದಲ್ಲಿ ಮಾತ್ರ ಕಂಡುಬಂದಿರುವ ಹೊಸ ಜಾತಿ. ಈ ಕುಲದ ಜೇಡಗಳನ್ನು ಸಾಮಾನ್ಯವಾಗಿ ರಾಫ್ಟ್ ಸ್ಪೈಡರ್ ಅಥವಾ ಫಿಶಿಂಗ್ ಸ್ಪೈಡರ್ ಎಂದು ಕರೆಯಲಾಗುತ್ತದೆ. ಕೇರಳ ಅರಣ್ಯ ಸಂಶೋಧನಾ ಸಂಸ್ಥೆ ನಡೆಸಿದ ಅಧ್ಯಯನದಲ್ಲಿ, ವಯನಾಡು ಜಿಲ್ಲೆಯ ಲಕ್ಕಿಡಿ ಮತ್ತು ಪೆರಿಯಾ ಅರಣ್ಯ ಪ್ರದೇಶಗಳಲ್ಲಿ ಇದನ್ನು ಪತ್ತೆ ಹಚ್ಚಲಾಯಿತಂತೆ.

ನಮ್ಮನ್ನು ಕರೆದುಕೊಂಡು ಹೋದ ಬಿಜು ಎಂಬ ಹೆಸರಿನ ಆ ಗಾರ್ಡ್, ಇನ್ನೂ ಕೆಲವು ವಿಷಯ ತಿಳಿಸಿದ. ಬಲೆ ಹೆಣೆದು ಬೇಟೆಗಾಗಿ ಕಾದು ಕುಳಿತುಕೊಳ್ಳುವ ಜೇಡ ಇದಲ್ಲ. ನೀರಿನಲ್ಲಿ ಹಾಗೂ ನೆಲದ ಮೇಲೆ ಎರಡೂ ಕಡೆ ಇರುತ್ತದೆ. ಕೀಟಗಳು ಅಥವಾ ಸಣ್ಣ ಮೀನುಗಳಿಂದ ಉಂಟಾಗುವ ಅತಿ ಸೂಕ್ಷ್ಮ ಕಂಪನಗಳನ್ನು ತನ್ನ ಕಾಲುಗಳ ಮೂಲಕವೇ ಗ್ರಹಿಸುತ್ತದೆ. ತಕ್ಷಣವೇ ಮಿಂಚಿನ ವೇಗದಲ್ಲಿ ನೀರಿನ ಮೇಲ್ಮೈಯ ದೌಡಾಯಿಸಿ ಬೇಟೆಯನ್ನು ಗಬಕಾಯಿಸುತ್ತದೆ. ಇದು ಉತ್ತಮ ಈಜುಗಾರ. ನೀರಿನೊಳಗೆ ಗಂಟೆಗಟ್ಟಲೆ ಮುಳುಗಿಯೂ ಇರಬಲ್ಲ ಡೈವರ್.



ಅವನು ಕರೆದುಕೊಂಡು ಹೋದ ನೀರಿನ ತಾಣ ಪ್ರಶಾಂತವಾಗಿತ್ತು. ಸುತ್ತ ಮುತ್ತ ಮುಗಿಲು ಮುಟ್ಟುವ ಮರಗಳು. ನಡುವೆ ಹರಿಯುವ ಸಣ್ಣ ತೊರೆ, ಅಲ್ಲಲ್ಲಿ ನಿಂತ ನೀರಿನ ಮಡುಗಳು. ಸುತ್ತಲಿನ ಗಿಡಮೂಲಿಕೆಗಳ, ಮರದಿಂದ ಬಿದ್ದ ಎಲೆಗಳು ಕೊಳೆತ ಒಂಥರ ಪರಿಮಳ. ಅವನು ಒಂದು ಗುಂಡಿಯಿಂದ ಇನ್ನೊಂದು ಗುಂಡಿಗೆ ನಮ್ಮನ್ನು ಸುತ್ತಾಡಿಸಿದ. ಒಂದರಲ್ಲೂ ಜೇಡ ಕಾಣಿಸಲಿಲ್ಲ. ಎಲ್ಲಾ ಸಂದಿಯಲ್ಲಿ ಅಡಗಿಕೊಂಡಿರುತ್ತದೆ, ಬರಬಹುದು ಕಾಯೋಣ ಸಾರೆ ಅಂದ.

ಹಾಗೇ ಕಾಯುತ್ತಿದ್ದಾಗ ಯೋಚನೆಗಳು ಬರತೊಡಗಿದವು. ಈ ಕಾಡುಗಳು, ಸಹ್ಯಾದ್ರಿ, ಶೋಲಾ ಅರಣ್ಯಗಳು ನಮ್ಮನ್ನು ಸದಾ ಚಕಿತಗೊಳಿಸುತ್ತಲೇ ಇರುತ್ತವೆ. ನಾವು ಏನು ಅಂದುಕೊಂಡಿದ್ದೇವೆ ಅಂದರೆ, ಈ ಭೂಮಿಯ ಮೇಲೆ ಮನುಷ್ಯ ಕಾಲಿಡದ ಪ್ರದೇಶವಿಲ್ಲ. ಇಲ್ಲಿರುವ ಎಲ್ಲ ಪ್ರಭೇದ, ಜಾತಿಗಳ ಮೃಗಪಕ್ಷಿಗಳನ್ನೂ ಕ್ರಿಮಿಕೀಟಗಳನ್ನೂ ಸಸ್ಯಗಳನ್ನೂ ಆಗಲೇ ಕಂಡು ನೋಡಿ ಅಧ್ಯಯನ ಮಾಡಿ ವರ್ಗೀಕರಿಸಿ ಆಗಿದೆ. ಊಹೂಂ! ಇದು ನಿಜವಲ್ಲ, ನಿಮಗೊಂದು ವಿಷಯ ಗೊತ್ತಿರಲಿ. ಕಳೆದ ವರ್ಷ ಭಾರತದಲ್ಲಿ ಪತ್ತೆಯಾದ ಹೊಸ ಜೀವಜಾತಿ 709!

ಪ್ರತಿ ಬಾರಿ ಮಳೆಕಾಡು, ಪರ್ವತ, ಕಣಿವೆ, ದ್ವೀಪ, ಹುಲ್ಲುಗಾವಲು, ಹೊಳೆಬಯಲುಗಳತ್ತ ಸಂಶೋಧನಾ ತಂಡಗಳು ಹೊರಟಾಗಲೂ ಕೇಳಿಕೊಳ್ಳುವ ಪ್ರಶ್ನೆ ಒಂದೇ. ಇಲ್ಲಿ ವಿಜ್ಞಾನ ಇನ್ನೂ ದಾಖಲಿಸದ ಜೀವಿ, ಸಸ್ಯ ಏನಾದರೂ ಅಡಗಿರಬಹುದಾ? 2025ರಲ್ಲಿ ಆ ಪ್ರಶ್ನೆಗೆ ಒಂದಲ್ಲ, ಬರೋಬ್ಬರಿ 709 ಉತ್ತರಗಳು ಸಿಕ್ಕಿದವು. ಕರ್ನಾಟಕದ ಚಾರ್ಮಾಡಿಯಲ್ಲೊಂದು ಜಿಗಿಯುವ ಹೊಸ ಜೇಡ, ಹಿಮಾಲಯದಲ್ಲೊಂದು ಹೊಸ ಬಾವಲಿ, ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಹೊಸ ಹಾವು, ಅರುಣಾಚಲ ಪ್ರದೇಶದಲ್ಲಿ ಎರಡು ವರ್ಣರಂಜಿತ ಹಲ್ಲಿಗಳು... ಹೀಗೆ ಭಾರತದ ವಿವಿಧ ಭಾಗಗಳಲ್ಲಿ ವಿನಿಗಳು ಇದುವರೆಗೆ ದಾಖಲೆಯಾಗದ ನೂರಾರು ಜೀವಿಗಳನ್ನು ಪತ್ತೆ ಹಚ್ಚಿದರು. ಇದೊಂದು ದಾಖಲೆ. ದೇಶದಲ್ಲಿ ಒಂದೇ ವರ್ಷದಲ್ಲಿ ಪತ್ತೆಯಾದ ಹೊಸ ಪ್ರಾಣಿ ಪ್ರಭೇದಗಳ ಅತ್ಯಧಿಕ ಸಂಖ್ಯೆಯಿದು.

ಭಾರತೀಯ ಪ್ರಾಣಿ ಸರ್ವೇಕ್ಷಣಾ ಸಂಸ್ಥೆ ಪ್ರಕಟಿಸಿದ ಮಾಹಿತಿ ಇದು– 2025ರಲ್ಲಿ ಒಟ್ಟು 709 ಪ್ರಾಣಿ ಪ್ರಭೇದಗಳು ಭಾರತದ ಜೀವಿವೈವಿಧ್ಯ ದಾಖಲೆಗೆ ಸೇರ್ಪಡೆಯಾಗಿವೆ. 2024ರಲ್ಲಿ ದಾಖಲಾಗಿದ್ದ 683 ಪ್ರಭೇದಗಳ ದಾಖಲೆಯನ್ನು ಇದು ಮೀರಿಸಿದೆ. ಈ 709ರಲ್ಲಿ 483 ಪ್ರಭೇದಗಳು ವಿಜ್ಞಾನಕ್ಕೆ ಸಂಪೂರ್ಣ ಹೊಸದು. ಉಳಿದ 226 ಪ್ರಭೇದಗಳು ಜಗತ್ತಿನ ಬೇರೆಡೆ ಈಗಾಗಲೇ ತಿಳಿದಂಥವು. ಆದರೆ ಭಾರತದಲ್ಲಿ ಮೊದಲ ಬಾರಿಗೆ ದಾಖಲಾಗಿವೆ. ಈ ಹೊಸ ಸೇರ್ಪಡೆಗಳೊಂದಿಗೆ ಭಾರತದಲ್ಲಿ ದಾಖಲಾಗಿರುವ ಒಟ್ಟು ಪ್ರಾಣಿ ವೈವಿಧ್ಯ 1,05,953 ಪ್ರಭೇದಗಳು ಮತ್ತು ಉಪಪ್ರಭೇದಗಳಿಗೆ ಏರಿಕೆಯಾಗಿದೆ. ಇದು ಜಗತ್ತಿನಲ್ಲಿ ದಾಖಲಾದ ಒಟ್ಟು ಜೀವಿವೈವಿಧ್ಯದ ಸುಮಾರು 5.3 ಶೇಕಡದಷ್ಟು. ಭಾರತ ವಿಶ್ವದ 17 ಮೆಗಾ-ಡೈವರ್ಸ್ ರಾಷ್ಟ್ರಗಳಲ್ಲಿ ಒಂದಾಗಿದೆ.

ಭಾರತದ ಕತೆಯೊಂದೇ ಅಲ್ಲ ಇದು. ಜಗತ್ತಿನಾದ್ಯಂತ ಹೀಗೆ ಹೊಸ ಹೊಸ ಜೀವಿಪ್ರಭೇದ, ಸಸ್ಯಜಾತಿ ಪ್ರತಿವರ್ಷ ಪತ್ತೆಯಾಗುತ್ತವೆ. ಸರಿಸುಮಾರು ವಾರ್ಷಿಕ 16000ದಷ್ಟು ಹೊಸ ಜೀವಿಗಳು ಕಂಡು ಬರುತ್ತವೆ.

(ಮುಂದುವರೆಯುತ್ತದೆ)

# ಚನ್ನಮ್ಮ ನಿಧನಕ್ಕೆ ಸಕಲೇಶಪುರದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ

## ಚಿರಶಾಂತಿ ಕೋರಿ ಮೌನಾಚರಣೆ | ಚನ್ನಮ್ಮನವರ ಕರುಣೆ ಮತ್ತು ಮಾನವೀಯ ಗುಣಗಳು ಸದಾ ಸ್ಮರಣೀಯ

• ಪ್ರಜೋದಯ ವರದಿ



**ಸಕಲೇಶಪುರ:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚನ್ನಮ್ಮ ಅವರ ನಿಧನಕ್ಕೆ ಸಂತಾಪ ಸೂಚಿಸಿ ಸಕಲೇಶಪುರ ತಾಲ್ಲೂಕು ಜೆಡಿಎಸ್ ಮುಖಂಡರು ಹಾಗೂ ವಿವಿಧ ಸಮಾಜಗಳ ಮುಖಂಡರು ಶನಿವಾರ ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಚನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಮುಖಂಡರು, ಅವರ ಆತ್ಮಕ್ಕೆ ಚಿರಶಾಂತಿ ಕೋರಿ ಮೌನಾಚರಣೆ ನಡೆಸಿ, ಮಾತನಾಡಿದ ಮಾಜಿ ಸಚಿವ ಎಚ್.ಕೆ.ಕುಮಾರಸ್ವಾಮಿ, ಚನ್ನಮ್ಮ ಅವರ ಅಗಲಿಕೆ ಜೆಡಿಎಸ್ ಕುಟುಂಬಕ್ಕೆ ಮಾತ್ರವಲ್ಲ, ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಪ್ರಧಾನಮಂತ್ರಿಯವರ ಪತ್ನಿಯಾಗಿದ್ದರೂ ಯಾವುದೇ ಅಹಂಕಾರವಿಲ್ಲದೆ ಮನೆಗೆ ಬಂದ ಪ್ರತಿಯೊಬ್ಬರನ್ನೂ ತಾಯಿಯ ಮಮತೆಯಿಂದ ಸ್ವಾಗತಿಸುತ್ತಿದ್ದರು ಎಂದು ಸ್ಮರಿಸಿದರಲ್ಲದೆ, ಅವರ ಸರಳತೆ, ಕರುಣೆ ಮತ್ತು ಮಾನವೀಯ ಗುಣಗಳು ಸದಾ ಸ್ಮರಣೀಯವಾಗಿರಲಿವೆ ಎಂದು ಹೇಳಿದರು.

ಮಾಜಿ ಶಾಸಕ ಎಚ್.ಎಂ. ವಿಶ್ವನಾಥ್ ಮಾತನಾಡಿ, ಸಮಾಜದಲ್ಲಿ ಕೆಲವರು ಬದುಕಿದ್ದಾಗಲೇ ಮರೆಯಾಗುತ್ತಾರೆ, ಇನ್ನು ಕೆಲವರು ನಿಧನರಾದ ಬಳಿಕವೂ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಚನ್ನಮ್ಮ ಅವರು ಅಂತಹ ಅಪರೂಪದ ವ್ಯಕ್ತಿತ್ವ ಹೊಂದಿದ್ದರು. ಅವರ ಪಾರ್ಥಿವ ಶರೀರವನ್ನು ಬೆಂಗಳೂರಿನಿಂದ ಹೊಳೆನರಸೀಪುರಕ್ಕೆ ಸಾಗಿಸುವ ವೇಳೆ ಮಾರ್ಗದುದ್ದಕ್ಕೂ ಸಾವಿರಾರು ಜನರು ಅಂತಿಮ ದರ್ಶನ ಪಡೆದಿದ್ದು, ಜನರ ಅಪಾರ ಪ್ರೀತಿ ಮತ್ತು ಗೌರವಕ್ಕೆ ಸಾಕ್ಷಿಯಾಗಿದೆ. ಎಲ್ಲರನ್ನು ಸಮಾನವಾಗಿ ಪ್ರೀತಿ ಮತ್ತು ಆತ್ಮೀಯತೆಯಿಂದ ಕಾಣುತ್ತಿದ್ದ ಆದರ್ಶ ಗೃಹಿಣಿಯಾಗಿದ್ದ ಅವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಅವರು ಸಂತಾಪ ವ್ಯಕ್ತಪಡಿಸಿದರು.

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯೆ ಚಂಚಲ ಕುಮಾರಸ್ವಾಮಿ ಅವರು ಮಾತನಾಡಿ, ಚನ್ನಮ್ಮ ಅವರು ದೇವೇಗೌಡರ ಕುಟುಂಬದ ಶಕ್ತಿಯಾಗಿದ್ದು, ದೇಶಕ್ಕೆ ಪ್ರಧಾನಿ, ಮುಖ್ಯಮಂತ್ರಿ ಹಾಗೂ ಸಚಿವರನ್ನು ನೀಡಿದ ಕುಟುಂಬದ ಬೆನ್ನೆಲುಬಾಗಿ ನಿಂತಿದ್ದರು. ಜಾತಿ-ಮತ ಭೇದವಿಲ್ಲದೆ ಎಲ್ಲರನ್ನು ಆತ್ಮೀಯತೆಯಿಂದ ಕಾಣುತ್ತಿದ್ದ ಅವರ ತಾಳ್ಮೆ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳು ಮತ್ತು ಕರುಣೆ ಎಲ್ಲರಿಗೂ ಆದರ್ಶವಾಗಿವೆ ಎಂದು ಹೇಳಿದರು.

ಚನ್ನಮ್ಮ ಅವರು ಎಂದಿಗೂ ಅಧಿಕಾರದ ಮದದಿಂದ ವರ್ತಿಸಿದವರಲ್ಲ, ಮತ್ತು ರಾಜಕೀಯದಲ್ಲಿ ಮೂಗು ತೂರಿಸಿದವರಲ್ಲ, ಅವರ ನಿಧನ ತುಂಬಲಾರದ ನಷ್ಟ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಜೆ.ಡಿ.ಎಸ್. ಅಧ್ಯಕ್ಷ ಕೆ.ಎಲ್. ಸೋಮಶೇಖರ್, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯೆ ಸಂಚಲ ಕುಮಾರಸ್ವಾಮಿ, ಜೆಡಿಎಸ್ ಹಿರಿಯ ಮುಖಂಡರಾದ ಕೊತ್ತನಹಳ್ಳಿ ತಮ್ಮಣ್ಣಗೌಡ, ಸುಧಾಕರ್, ಬಿ.ಎ.ಜಗನ್ನಾಥ್, ಬೆಕ್ಕನಹಳ್ಳಿ ನಾಗರಾಜ್, ಪಕ್ಷದ ಮುಖಂಡರಾದ ಸಚಿನ್ ಪ್ರಸಾದ್, ಸುಪ್ರದೀಪ್ ಯಜಮಾನ್, ಸ.ಬ. ಭಾಸ್ಕರ್, ವೀರಶೈವ ಸಮಾಜದ ಮುಖಂಡ ಮೋಗಲಿ ಧರ್ಮಪ್ಪ, ಬಂಟರ ಸಂಘದ ಮುಖಂಡ ಸಂಜೀತ್ ಶೆಟ್ಟಿ, ಮುಖಂಡ ಕಾಡಪ್ಪ, ಮುಸ್ಲಿಂ ಸಮುದಾಯದ ಮುಖಂಡರಾದ ಮಲ್ನಾಡ್ ಜಾಕಿರ್, ಎಸ್.ಎಸ್. ಅಸ್ಲಾಂ ಸೇರಿದಂತೆ ಜೆ.ಡಿ.ಎಸ್.ನ ಮುಖಂಡರು, ವಿವಿಧ ಸಮಾಜಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಪ್ರಶ್ನೆ ಪತ್ರಿಕೆ ಸೋರಿಕೆಯಾದರೆ ಡಿ.ಸಿ.ಗಳೇ ಹೊಣೆ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಶ್ನೆ ಪತ್ರಿಕೆ ಸೋರಿಕೆಯಾದರೆ ಜಿಲ್ಲಾಧಿಕಾರಿಗಳೇ ಹೊಣೆ ಎಂದು ಸಿಎಂ ಡಿಕೆ ಶಿವಕುಮಾರ್ ಮಹತ್ವದ ಘೋಷಣೆ ಮಾಡಿದ್ದಾರೆ.

ಈ ಕುರಿತಾಗಿ ಅವರು ಮಾಧ್ಯಮಗೋಷ್ಠಿಯಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಸಿಎಂ ಡಿಕೆಶಿ ನೀಡಿರುವ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ಚಿತ್ರದುರ್ಗದ ಮುರುಘಾ ಮಠದ ಅನುಭವ ಮಂಟಪದಲ್ಲಿ ಶನಿವಾರ ನಡೆದ ಬೆಂಗಳೂರು ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಗೂ ನಂತರ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಭೆಯಲ್ಲಿ ಶಾಸಕರು ಮುಂದಿಟ್ಟ ಕ್ಷೇತ್ರದ ಸಮಸ್ಯೆಗಳನ್ನು ಆಲಿಸಿದರು. ಶೀಘ್ರ ಬಗೆಹರಿಸಬಹುದಾದ ಸಮಸ್ಯೆಗಳನ್ನು ದಾಖಲಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು. ಶಾಸಕರು ಹೇಳಿದ ಎಲ್ಲ ಅಂಶಗಳು ದಾಖಲಾಗಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ನೀಟ್ ಹಗರಣ ಎಲ್ಲರ ಗಮನದಲ್ಲಿರಲಿ. ಪ್ರಶ್ನೆ ಪತ್ರಿಕೆ ಸೋರಿಕೆಯಾದರೆ ಅಧಿಕಾರಿಗಳೇ ಹೊಣೆ ಎಂದು ಎಚ್ಚರಿಸಿದರು.

### ಕಾಮನ್‌ವೆಲ್ತ್ ಕ್ರೀಡಾಕೂಟ: ಖಾತೆ ತೆರೆದ ಭಾರತ

# ಝುಂಡುಕುಮಾರ್‌ಗೆ ಕಂಚು

• ಪ್ರಜೋದಯ ವರದಿ



**ಗ್ಲಾಸ್ಗೋ (ಸ್ಕಾಟ್ಲೆಂಡ್):** 2026ರ ಕಾಮನ್‌ವೆಲ್ತ್ ಕ್ರೀಡಾಕೂಟ ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ಆರಂಭವಾಗಿದ್ದು, ಕ್ರೀಡಾಕೂಟದಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಗೆಲ್ಲುವ ಮೂಲಕ ಭಾರತ ಶುಭಾರಂಭ ಮಾಡಿದೆ. ಪ್ಯಾರಾಪವರ್‌ಲಿಫ್ಟರ್ ಝುಂಡು ಕುಮಾರ್ ಪುರುಷರ ಹೆವಿವೇಯ್ಟ್ ಪ್ಯಾರಾ ಪವರ್ ಲಿಫ್ಟಿಂಗ್ ಸ್ಪರ್ಧೆ ಯಲ್ಲಿ ಕಂಚಿನ ಪದಕ ಗೆದ್ದಿದ್ದು ಇದು ದೇಶದ ಮೊದಲ ಪದಕವಾಗಿದೆ.

28 ವರ್ಷದ ಅವರು 181 ಕೆಜಿ ಮತ್ತು 190 ಕೆಜಿ ಭಾರ ಎತ್ತಿ 130.9 ಅಂಕಗಳನ್ನು ಗಳಿಸಿ ಪೋಡಿಯಂ ಫಿನಿಶ್ ಪಡೆದರು. 196 ಕೆಜಿಯಲ್ಲಿ ಅವರು ತಮ್ಮ ಅಂತಿಮ ಪ್ರಯತ್ನದಲ್ಲಿ ವಿಫಲರಾದರು. ಮತ್ತೊಬ್ಬ ಭಾರತೀಯ ಸುಧೀರ್ (114.1) ಆರನೇ ಸ್ಥಾನ ಪಡೆದರು. ನೈಜೀರಿಯಾದ ಇದ್ರಿಸ್ ರಿಲುವಾನ್ 132.8 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರೆ, ಮ್ಯಾಥ್ಯೂ ಹಾರ್ಡಿಂಗ್ (131) ಬೆಳ್ಳಿ ಪದಕ ಗೆದ್ದರು.

ಬಿಹಾರದ ನಳಂದ ಜಿಲ್ಲೆಯ ಹರ್ನೌತ್ ಗ್ರಾಮದ ಝುಂಡು ಕುಮಾರ್ ಅವರ ಗೆಲುವು ಅವರ ಗಮನಾರ್ಹ ಪ್ರಗತಿಯಾಗಿದೆ. ಐದು ವರ್ಷದವನಿದ್ದಾಗ ಪೋಲಿಯೊಗೆ ತುತ್ತಾದ ನಂತರ ತಮ್ಮ ಕುಟುಂಬವನ್ನು ಪೋಷಿಸಲು ತಮ್ಮ ಹೆತ್ತವರಿಗೆ ತರಕಾರಿಗಳನ್ನು ಮಾರಾಟ ಮಾಡಲು ಸಹಾಯ ಮಾಡಿದರು.

ಕಡಿಮೆ ಆರ್ಥಿಕ ಬೆಂಬಲದೊಂದಿಗೆ, ಕುಮಾರ್ 2010 ಮತ್ತು 2012ರ ನಡುವೆ ಶಕ್ತಿ ಹೆಚ್ಚಿಸಿಕೊಳ್ಳಲು ಮಾತ್ರ ತೂಕ ತರಬೇತಿಯನ್ನು ಪ್ರಾರಂಭಿಸಿದರು. ನಂತರ ಶಾಟ್ ಪುಟ್ ಮತ್ತು ಜಾವೆಲಿನ್‌ನಲ್ಲಿ ತಮ್ಮ ಕೈಯನ್ನು ಪ್ರಯತ್ನಿಸಿದರು. ಅಂತಿಮವಾಗಿ, ಅವರು ಪ್ಯಾರಾಪವರ್ ಲಿಫ್ಟಿಂಗ್‌ನಲ್ಲಿ ಸಾಧನೆಗೈದರು.

# ಓದುವ ಜೊತೆಗೆ ಸೃಜನಶೀಲತೆ ಮೈಗೂಡಿಸಿಕೊಳ್ಳಿ

## ವಿದ್ಯಾರ್ಥಿಗಳಿಗೆ ಶಾಸಕ ಎ. ಮಂಜು ಕಿವಿಮಾತು

• ಪ್ರಜೋದಯ ವರದಿ



**ಅರಕಲಗೂಡು:** ವಿದ್ಯಾರ್ಥಿಗಳು ಮುಂದಿನ ಭವಿಷ್ಯ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಓದುವ ಜತೆಗೆ ಸೃಜನಶೀಲತೆಯನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದು ಶಾಸಕ ಎ. ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಹೆಬ್ಬಾಲೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ನಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಹಾಗೂ ಭಾರತ ಸೇವಾದಳ, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಉದ್ಘಾಟನೆ ಮಾಡಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಗುರಿ ಅತ್ಯಂತ ಮುಖ್ಯವಾಗಿದ್ದು, ಕನಸು ಕಾಣದ ವ್ಯಕ್ತಿಗೆ ನಿರೀಕ್ಷಿತ ಗುರಿಯನ್ನು ತಲುಪುವುದು ಅಸಾಧ್ಯ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನದಲ್ಲಿ ಒಂದು ನಿರ್ದಿಷ್ಟ ಗುರಿಯನ್ನು ಹೊಂದಿ, ಅದನ್ನು ಸಾಧಿಸುವಂತಹ ನಿಟ್ಟಿನಲ್ಲಿ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ತಮ್ಮ ಪೋಷಕರ ನಂಬಿಕೆ ಹಾಗೂ ಗುರುಗಳ ವಿಶ್ವಾಸವನ್ನು ಗಳಿಸಬೇಕು. ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಸಮಾಜದಲ್ಲಿ ಸಾಧನೆ ಮಾಡಿದ ಮಹಾನೀಯ ವ್ಯಕ್ತಿಗಳನ್ನು ಆದರ್ಶವನ್ನಾಗಿಟ್ಟುಕೊಂಡು ಅಧ್ಯಯನ ಮಾಡಿ, ಅವರ ಉತ್ತಮ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ತಾಲೂಕಿನಲ್ಲಿ ಆರಂಭಗೊಂಡಿರುವ ಮಕ್ಕಳ ಮನೆ ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಉತ್ತೇಜನ ನೀಡುವಂತಹ ಉತ್ತಮ ಯೋಜನೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

ಕೇವಲ ಖಾಸಗಿ ಶಾಲೆಗಳಷ್ಟೇ ಅಲ್ಲದೆ ಸರ್ಕಾರಿ ಶಾಲಾ- ಕಾಲೇಜುಗಳಲ್ಲಿಯೂ ಅತ್ಯುತ್ತಮ ಬೋಧಕ ವರ್ಗಗಳಿದ್ದು, ಸರಿಯಾದ ಪಾಠ ಪ್ರವಚನಗಳು ನಡೆಯುತ್ತವೆ. ಹಾಗಾಗಿ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಲಕ್ಷ್ಮಣ್, ಸಿಡಿಸಿ ಸದಸ್ಯರಾದ ಪಿ.ಬಿ. ವಿರೂಪಾಕ್ಷ, ಕೃಷ್ಣೇಗೌಡ,ಮುಖಂಡ ನರಸೇಗೌಡ, ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಂತರ ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

### ಸಕಲೇಶಪುರ, ಆಲೂರು ತಾಲ್ಲೂಕಿನಲ್ಲಿ ಹೆಚ್ಚುತ್ತಿರುವ ದರೋಡೆ ಪ್ರಕರಣ

# ಆರೋಪಿಗಳ ಬಂಧನಕ್ಕೆ ಐಜಿಪಿಗೆ ಶಾಸಕ ಸಿಮೆಂಟ್ ಮಂಜು ಮನವಿ

• ಪ್ರಜೋದಯ ವರದಿ





**ಸಕಲೇಶಪುರ:** ಸಕಲೇಶಪುರ ಹಾಗೂ ಆಲೂರು ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ದರೋಡೆ ಮತ್ತು ಕಳವು ಪ್ರಕರಣಗಳ ಹಿನ್ನೆಲೆಯಲ್ಲಿ ಶಾಸಕ ಸಿಮೆಂಟ್ ಮಂಜು ಅವರು ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ (ಐಜಿಪಿ) ಬೋರಲಿಂಗಯ್ಯ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪ್ರಕರಣಗಳನ್ನು ಶೀಘ್ರ ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸುವಂತೆ ಮನವಿ ಮಾಡಿದರು.

ಕ್ಷೇತ್ರದಲ್ಲಿ ನಡೆದಿರುವ ಸರಣಿ ದರೋಡೆ ಪ್ರಕರಣಗಳು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದ್ದು, ಕಾನೂನು ಸುವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಬಲಪಡಿಸುವ ನಿಟ್ಟಿನಲ್ಲಿ ಪೊಲೀಸರು ತ್ವರಿತ ಹಾಗೂ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಶಾಸಕರು ಒತ್ತಾಯಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಐಜಿಪಿ ಬೋರಲಿಂಗಯ್ಯ ಅವರು, ಇತ್ತೀಚೆಗೆ ಸಕಲೇಶಪುರದಲ್ಲಿ ನಡೆದ ಮನೆ ದರೋಡೆ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಅಲ್ಲದೆ, ಆಲೂರು ತಾಲೂಕಿನ ಬಿ.ಎಂ. ರಸ್ತೆಯಲ್ಲಿ ನಡೆದ ಸುಮಾರು 20 ಲಕ್ಷ ರೂ. ಮೌಲ್ಯದ ದರೋಡೆ ಪ್ರಕರಣ ಹಾಗೂ ಬಾಳುಪೇಟೆಯ ದೇವರಮ್ಮ ದೇವಸ್ಥಾನದಿಂದ ಪುರಾತನ ಮುಕುಟ ಕಳವು ಪ್ರಕರಣವನ್ನು ಮರು ಪರಿಶೀಲನೆ ನಡೆಸಿ, ಹಳೆಯ ಹಾಗೂ ಹೊಸ ಪ್ರಕರಣಗಳ ನಡುವೆ ಯಾವುದೇ ಸಂಬಂಧವಿದೆಯೇ ಎಂಬುದನ್ನು ಸಮಗ್ರವಾಗಿ ತನಿಖೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಅವರು ಹೇಳಿದರು.

ಅಗತ್ಯವಿದ್ದಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು. ದರೋಡೆ ಪ್ರಕರಣಗಳನ್ನು ಭೇದಿಸುವುದು ಪೊಲೀಸ್ ಇಲಾಖೆಯ ಆದ್ಯತೆಯಾಗಿದ್ದು, ತಪ್ಪಿತಸ್ಥರನ್ನು ಶೀಘ್ರ ಬಂಧಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಐಜಿಪಿ ಅವರು ಭರವಸೆ ನೀಡಿದರು.

ಈ ಕುರಿತು ಶಾಸಕ ಸಿಮೆಂಟ್ ಮಂಜು ಮಾತನಾಡಿ, ಕ್ಷೇತ್ರದ ಜನರಲ್ಲಿ ಭದ್ರತೆಯ ಭಾವನೆ ಮೂಡಿಸುವ ರೀತಿಯಲ್ಲಿ ಪೊಲೀಸರು ಕಾರ್ಯ ನಿರ್ವಹಿಸಬೇಕು. ದರೋಡೆ ಪ್ರಕರಣಗಳನ್ನು ಶೀಘ್ರ ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸುವ ಮೂಲಕ ಕಾನೂನು ಸುವ್ಯವಸ್ಥೆ ಕಾಪಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಆಲೂರು ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿ ದರೋಡೆ ಹಾಗೂ ಕಳವು ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕರು ತೀವ್ರ ಆತಂಕದಲ್ಲಿದ್ದಾರೆ. ಹಾಗಾಗಿ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕರ ಆತಂಕ ದೂರ ಮಾಡಬೇಕು ಎಂದು ಮನವಿ ಮಾಡಿಕೊಂಡರು.

# ಸರ್ಕಾರಿ ಕಾಲೇಜುಗಳಲ್ಲೂ ಉತ್ತಮ ಬೋಧಕ ವ್ಯವಸ್ಥೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ನಾವು ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರವೇಶ ಪಡೆದರಷ್ಟೆ ಉತ್ತಮ ಭವಿಷ್ಯ ಎನ್ನುವಂತಿಲ್ಲ. ಇಂದಿನ ಜಾಗತೀಕರಣ ಯುಗದಲ್ಲಿ ಎಲ್ಲ ಮಾಹಿತಿಯೂ ಕೈಗೆಟುಕುವ ಕಾರಣ, ಸರ್ಕಾರಿ ಕಾಲೇಜುಗಳಲ್ಲೇ ಉತ್ತಮ ಭೋದಕ ವ್ಯವಸ್ಥೆ ಬಳಸಿಕೊಂಡು ಒಳ್ಳೆಯ ಅಂಕ ಗಳಿಸಬಹುದು ಎಂದು ಪಡುವಲಹಿಪ್ಪೆ ಕಾಲೇಜಿನ ಪ್ರೊ. ವಿಶ್ವನಾಥ್ ತಿಳಿಸಿದರು.

ತಾಲೂಕಿನ ಎಲೆಚಾಗಹಳ್ಳಿ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತಮ ಭವಿಷ್ಯಕ್ಕೆ ಪೂರಕ ವಾತಾವರಣ ಸರ್ಕಾರಿ ಕಾಲೇಜಿನಲ್ಲಿಯೂ ಇದೆ. ಮೌಲ್ಯಾಧಾರಿತವಾಗಿ ನೇಮಕಗೊಂಡ ಉಪನ್ಯಾಸಕರೂ ಇದ್ದಾರೆ. ಅವುಗಳ ಸದ್ಬಳಕೆಗೆ ವಿದ್ಯಾರ್ಥಿಗಳ ಕೈಯಲ್ಲಿ ಇರುತ್ತದೆ. ಇದನ್ನು ಮನಗಂಡು ಪೋಷಕರ ಕನಸು ನನಸು ಮಾಡಲು ವಿದ್ಯಾರ್ಥಿಗಳು ಮನಸ್ಸು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ 600 ಕ್ಕೆ 575 ಅಂಕ ಗಳಿಸಿ, ಇತಿಹಾಸ ಮತ್ತು ಅರ್ಥಶಾಸ್ತ್ರದಲ್ಲಿ 100 ರಷ್ಟು ಅಂಕಗಳಿಸಿರುವ ಬಿ.ಎಸ್.ಸ್ಫೂರ್ತಿ, ಸಹನಾ, ತೇಜಸ್ವಿನಿ ಎಂಬ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾಲೇಜು ಪ್ರಾಂಶುಪಾಲ ಫೈಯಾಜ್ ಪಾಷ, ಉಪನ್ಯಾಸಕಿ ರಾಗಿಣಿ, ಕೃಷ್ಣಮೋಹನ್, ಉಪನ್ಯಾಸಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

# ಸ್ಕೌಟ್ಸ್-ಗೈಡ್ಸ್ ಮಕ್ಕಳಲ್ಲಿ ಸೇವಾ ಮನೋಭಾವ ಬೆಳೆಸುತ್ತದೆ

## ಬೈರಾಪುರದ ಎಸ್.ವಿ. ಪಬ್ಲಿಕ್ ಶಾಲೆಯಲ್ಲಿ ತಾಲ್ಲೂಕು ಮಟ್ಟದ ಕಾರ್ಗಿಲ್ ವಿಜಯ್ ದಿವಸ್ ಆಚರಣೆ

• ಪ್ರಜೋದಯ ವರದಿ



**ಆಲೂರು:** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಲ್ಲಿ ದೇಶಪ್ರೇಮ, ರಾಷ್ಟ್ರಭಕ್ತಿ, ಸೇವಾ ಮನೋಭಾವ, ಸಹೋದರತೆಯನ್ನು ವೃದ್ಧಿಸುತ್ತದೆ ಎಂದು ಎಸ್.ವಿ. ಪಬ್ಲಿಕ್ ಶಾಲೆಯ ಕಾರ್ಯದರ್ಶಿ ಬಿ.ಜಿ.ಗಿರೀಶ್ ಅಭಿಪ್ರಾಯಪಟ್ಟರು.

ತಾಲ್ಲೂಕು ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಬೈರಾಪುರದ ಎಸ್.ವಿ. ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಸಾಮಾಜಿಕ ಮೌಲ್ಯಗಳು, ಸಾಂಸ್ಕೃತಿಕ ಮೌಲ್ಯಗಳು, ನೈತಿಕ ಮೌಲ್ಯಗಳು ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ ಸ್ಕೌಟ್ಸ್ ಗೈಡ್ ಚಳುವಳಿ ಮಕ್ಕಳಲ್ಲಿ ರಾಷ್ಟ್ರೀಯ ಭಾವೈಕ್ಯತೆ, ಮೂಡಿಸುವ ಹಿನ್ನೆಲೆಯಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಿಸಿ ಈ ಮುಖೇನ ಸೈನಿಕರ ಮಹತ್ವವನ್ನು ಅವರು ದೇಶಕ್ಕಾಗಿ ಹೋರಾಡುವ ಪರಿಯನ್ನು ಮಕ್ಕಳಿಗೆ ಅರ್ಥ ಮಾಡಿಸಿ ಕೊಡಲಾಗುತ್ತದೆ. ಮಕ್ಕಳು ಸ್ಕೌಟ್ಸ್ ಗೈಡ್ಸ್ ಸಮವಸ್ತ್ರ ಧರಿಸಿದ ಪುಟಾಣಿ ಯೋಧರಿದ್ದಂತೆ ಇವರನ್ನು ನಮ್ಮ ಸ್ಕೌಟ್ಸ್ ಗೈಡ್ಸ್ ಶಿಕ್ಷಕರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢಗೊಳಿಸುತ್ತಾರೆ ಎಂದು ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್ ಮಾತನಾಡಿ, ದೇಶ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ದೇಶಕ್ಕಾಗಿ ನಾನೇನು ಕೊಟ್ಟಿದ್ದೇನೆ ಎನ್ನುವುದು ಮುಖ್ಯ. ಸ್ಕೌಟ್ಸ್ ಗೈಡ್ಸ್ ಇಂಗ್ಲೆಂಡಿನ ಒಬ್ಬ ನಿವೃತ್ತ ಯೋಧ ಸ್ಥಾಪಿಸಿದಂತ ಸಂಸ್ಥೆ. ಮಕ್ಕಳಲ್ಲಿ ಶಿಸ್ತು, ಸಂಯಮ, ರಾಷ್ಟ್ರಭಕ್ತಿ, ದೇಶಪ್ರೇಮ, ಸೇವಾ ಮನೋಭಾವ ಮುಂತಾದ ಮಹೋನ್ನತ ಗುಣಗಳನ್ನು ಬೆಳೆಸುವ ಹಿನ್ನೆಲೆಯಲ್ಲಿ ಈ ಸಂಸ್ಥೆಯನ್ನು ಹುಟ್ಟುಹಾಕಿದರು. ಕಾರ್ಗಿಲ್ ವಿಜಯ ದಿವಸ್ ಆಚರಣೆಯನ್ನು ದಳ ಹಂತದಿಂದ, ತಾಲೂಕು ಹಂತ, ಜಿಲ್ಲಾ ಹಂತ, ರಾಜ್ಯ ಅಂತ ಹಾಗೂ ರಾಷ್ಟ್ರ ಹಂತದಲ್ಲಿಯೂ ಆಚರಿಸಲಾಗುತ್ತದೆ ಎಂದರು.

ಮುಖ್ಯ ಶಿಕ್ಷಕಿ ನಳಿನ ಗಿರೀಶ್ ಪ್ರಾಸ್ತವಿಕವಾಗಿ ಮಾತನಾಡಿ, ಭಾರತದಲ್ಲಿ ಕಾರ್ಗಿಲ್ ಯುದ್ಧ ಒಂದು ಮೈಲುಗಲ್ಲು. ಪಾಕಿಸ್ತಾನ ಮತ್ತು ಭಾರತದ ನಡುವೆ ನಡೆದ ಮಹತ್ತರ ಕದನ. 1999ರ ಮೇ-ಜೂಲೈನಲ್ಲಿ ಲಡಾಖ್‌ನ ಕಾರ್ಗಿಲ್ ವಲಯದಲ್ಲಿ ನಡೆದ 60 ದಿನಗಳಿಗೂ ಅಧಿಕ ಕಾಲದ ಕದನದಲ್ಲಿ ಭಾರತೀಯ ಸೈನಿಕರು ಪಾಕಿಸ್ತಾನಿ ನುಸುಳುಕೋರರನ್ನು ಹಿಮ್ಮೆಟ್ಟಿಸಿದರು. ಜುಲೈ 26, 1999 ರಂದು ಭಾರತೀಯ ಸೇನೆಯು ಶತ್ರುಗಳಿಂದ ನಮ್ಮ ಪರ್ವತ ಶಿಖರಗಳನ್ನು ಮರಳಿ ವಶಪಡಿಸಿಕೊಂಡು ಆಪರೇಷನ್ ವಿಜಯ್ ಯಶಸ್ವಿಯಾಗಿದೆ ಎಂದು ಘೋಷಿಸಿತು. ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಧೀರ ಯೋಧರ ಗೌರವಾರ್ಥವಾಗಿ ಈ ದಿನದಂದು ದೇಶಾದ್ಯಂತ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ನವದೆಹಲಿಯಲ್ಲಿರುವ ಯುದ್ಧ ಸ್ಮಾರಕಗಳಲ್ಲಿ ಪ್ರಧಾನ ಮಂತ್ರಿಗಳು ಮತ್ತು ಸೇನಾ ಮುಖ್ಯಸ್ಥರು ವೀರ ಯೋಧರಿಗೆ ಪುಷ್ಪನಮನ ಸಲ್ಲಿಸುತ್ತಾರೆ. ವಿವಿಧ ರಕ್ಷಣಾ ಕ್ಷೇತ್ರಗಳು, ಶಾಲೆಗಳು ಮತ್ತು ಸಂಘ ಸಂಸ್ಥೆಗಳು ಸೈನಿಕರ ಶೌರ್ಯವನ್ನು ಸ್ಮರಿಸಿ ನಾನಾ ದೇಶಭಕ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಭಾರತೀಯ ಸೇನೆಯ ಯೋಧ ರಾಜೇಶ್ ಹಾಗೂ ನಿವೃತ್ತ ಯೋಧ ನಾಗೇಶ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

### ವಿಶೇಷ ಅಲಂಕಾರ



ಹಾರನಹಳ್ಳಿ: ಇಲ್ಲಿನ ಲಕ್ಷ್ಮೀ ನರಸಿಂಹ ದೇವಾಲಯದಲ್ಲಿ ಪ್ರಥಮ ಏಕಾದಶಿ ಅಂಗವಾಗಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ, ಚನ್ನಕೇಶವ ಸ್ವಾಮಿ, ವೇಣುಗೋಪಾಲ ಸ್ವಾಮಿಗೆ ಅಭಿಷೇಕ ವಿಶೇಷ ಅಲಂಕಾರ ಮಾಡಲಾಯಿತು. ಸಮೀಪದ ಗುತ್ತಿನಕೆರೆ ಶ್ರೀರಂಗನಾಥ ಸ್ವಾಮಿ ಕ್ಷೇತ್ರದಲ್ಲಿ ಏಕಾದಶಿ ಅಂಗವಾಗಿ ಸ್ವಯಂಭೋ ಶ್ರೀರಂಗನಾಥ ಸ್ವಾಮಿಯವರಿಗೆ ಪಂಚಾಮೃತ ಅಭಿಷೇಕ ತುಳಸಿಅರ್ಚನೆ ಮಹಾ ಮಂಗಳಾರತಿ ವಿವಿಧ ಧಾರ್ಮಿಕ ಸೇವೆಗಳು ನಡೆಯಿತು ಗಂಧದ ಅಲಂಕಾರ ಶ್ರೀ ಸ್ವಾಮಿಯವರಿಗೆ ಬಣ್ಣ ಬಣ್ಣದ ಹೂಗಳಿಂದ ಅಲಂಕಾರ ಮಾಡಿದ್ದು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

### ಹೂವಿನಹಳ್ಳಿ ಕಾವಲು ಗ್ರಾಮದಲ್ಲಿ ತೊಗಲು ಗೊಂಬೆ ಪ್ರದರ್ಶನ, ವಿಚಾರ ಸಂಕಿರಣ

# ಜನಪದ ಕಲಾವಿದರು ದೇಶದ ರಾಯಭಾರಿಗಳು

• ಪ್ರಜೋದಯ ವರದಿ



**ಹಾಸನ:** ಮನುಷ್ಯ ಯಾವಾಗ ಈ ಭೂಮಿಯಲ್ಲಿ ಹುಟ್ಟಿದನೋ ಆಗಿನಿಂದಲೇ ಜನಪದ ಕಲೆಯೂ ಹುಟ್ಟಿಕೊಂಡಿದೆ. ಜನಪದ ಕಲೆಗೆ ಸಾವಿಲ್ಲ. ಮನುಷ್ಯನ ಅಂತ್ಯದೊಂದಿಗೆ ಜನಪದ ಕಲೆ ನಾಶವಾಗಬಹುದು ಅಷ್ಟೇ. ಜನಪದ ಕಲಾವಿದರು ಈ ದೇಶದ ರಾಯಬಾರಿಗಳು ಎಂದು ಜನಪದ ಸಾಹಿತಿ ಡಾ. ಹಂಪನಹಳ್ಳಿ ತಿಮ್ಮೇಗೌಡ ಅವರು ತಿಳಿಸಿದರು.

ತಾಲ್ಲೂಕಿನ ಹೂವಿನಹಳ್ಳಿ ಗ್ರಾಮದ ಚಿತ್ರಕೂಟ ಗುರುಕುಲ ಕಲಾ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮತ್ತು ಹಾಸನ ಹಾಗೂ ರಾಜಾರಾಮ್ ತೊಗಲುಗೊಂಬೆ ಮೇಳ ಇವರ ಸಹಯೋಗದೊಂದಿಗೆ ಶನಿವಾರ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ತೊಗಲುಗೊಂಬೆ ವಿಚಾರ ಸಂಕೀರಣ ಮತ್ತು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಕಲೆ ಯಾವುದೇ ಒಂದು ಜಾತಿ, ಪ್ರದೇಶಕ್ಕೆ ಸೀಮಿತವಾದುದಲ್ಲ. ತೊಗಲು ಗೊಂಬೆ ಕಲೆ ಮೂಲತ: ಆಂದ್ರ, ಮರಾಠಿಯಲ್ಲಿ ಹುಟ್ಟಿದ್ದು ಹಿಂದೆ ರಾಮಾಯಣ ಭಾಗವತ ಕಥೆಗೆ ಸೀಮಿತವಾಗಿ ಈಗ ಸರ್ಕಾರದ ಪ್ರಚಾರಾತ್ಮಕ ಕಾರ್ಯಕ್ರಮಕ್ಕೂ ಬಳಕೆಯಾಗುತ್ತಿದೆ. ಹಿರಿಯ ಕಲಾವಿದರು ಕಿರಿಯರಿಗೆ ತರಬೇತಿ ನೀಡಿ ಈ ಮೂಲ ಕಲೆಯನ್ನು ಉಳಿಸಬೇಕಿದೆ ಎಂದು ಕಿವಿಮಾತು ಹೇಳಿದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ಗುಂಡುರಾಜ್ ತಮ್ಮ ಕಲಾಪ್ರತಿಭೆಯಿಂದ ಇಂದು ಅಂತರರಾಷ್ಟ್ರೀಯ ಕಲಾವಿದರಾಗಿ ಹೆಸರು ಗಳಿಸಿದ್ದಾರೆ. ಅಮೇರಿಕಾ ದೇಶದಲ್ಲಿ ಆಗಿಂದಾಗ್ಗೆ ಇವರು ಕಲಾಪ್ರದರ್ಶನ ನೀಡುತ್ತಿದ್ದಾರೆ. ಗೊರೂರಿನ ಮನು ಅಮೇರಿಕಾದಲ್ಲಿ ಕನ್ನಡ ಸಂಘ ಮೂಲಕ ಕಲಾ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಹೇಳಿದರು.

ಡಾ.ಗೊರೂರು ರಾಮಸ್ವಾಮಿ ಅಯ್ಯಂಗಾರ್ ತಮ್ಮ ಸಾಹಿತ್ಯ ಸಾಧನೆಯಿಂದ ಗೊರೂರು ಗ್ರಾಮವನ್ನು ರಾಜ್ಯ, ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದ ಪ್ರಸಿದ್ಧಿಗೆ ಕಾರಣರಾದರೋ ಹಾಗೆಯೇ ಹೂವಿನಹಳ್ಳಿ ಕಾವಲು ಕೂಡ ಗುಂಡುರಾಜ್ ಅವರಿಂದ ಖ್ಯಾತಿ ಗಳಿಸುತ್ತಿದೆ. ಬಾಲ್ಯದ ದಿನಗಳಲ್ಲಿ ನಮ್ಮೂರ ಗಣಪತಿ ಪೆಂಡಾಲಿನಲ್ಲಿ ನಡೆಯುತ್ತಿದ್ದ ಗಣೇಶೋತ್ಸವ ಸಂದರ್ಭಗಳಲ್ಲಿ, ತಮ್ಮ ಮನೆ ಮುಂಭಾದಲ್ಲಿ ತೊಗಲು ಗೊಂಬೆ ಪ್ರದರ್ಶನ ನೋಡಿ ಆನಂದಿಸಿದ್ದನ್ನು ಗೊರೂರು ಅನಂತರಾಜು ಸ್ಮರಿಸಿದರು.

ಕೆ.ಎಸ್.ಆರ್.ಟಿ.ಸಿ. ನಿವೃತ್ತ ನೌಕರರು ಯು.ಜೆ.ಮಲ್ಲಿಕಾರ್ಜುನ, ತಬಲವಾದಕ ಕೃಷ್ಣಮೂರ್ತಿ, ವಿವೇಕಾನಂದ ವಿದ್ಯಾಸಂಸ್ಥೆ ಉದಯ ಕುಮಾರ್, ಮೇಕಪ್ ಹನುಮಂತು, ಜನಪದ ಗಾಯಕ ಕಟ್ಟೆಬೆಳಗುಳಿ ಕುಮಾರ್, ಪೌರಾಣಿಕ ನಾಟಕ ಕಲಾವಿದರಾದ ಯರೇಹಳ್ಳಿ ಮಂಜೇಗೌಡರು, ಶ್ರೀಕಂತಪ್ಪ, ಚಂದ್ರಶೇಖರ್ ಹೊಳೆನರಸೀಪುರ, ಪ್ರಭಾಕರ್, ಸೋಮಶೇಖರ್, ದರ್ಶನ್ ವೆಂಕಟೇಶ್, ಕವಯಿತ್ರಿ ಪಲ್ಲವಿ ಇದ್ದರು.

ದಿವಂಗತ ಗಾಡೇನಹಳ್ಳಿ ಕೃಷ್ಣೇಗೌಡರ ರಂಗಭೂಮಿ ಸೇವೆಯನ್ನು ಸ್ಮರಿಸಿ ಇವರ ಧರ್ಮಪತ್ನಿಯನ್ನು ಹಾಗೂ ಪಶ್ಚಿಮ ಬಂಗಾಳದ ಕಲಾವಿದರು ಪಾರ್ಥ ಪ್ರತಿಮಾ ಪೌಲ್ ಅವರನ್ನು ಗುಂಡುರಾಜ್ ಸನ್ಮಾನಿಸಿದರು. ಗುಂಡುರಾಜ್ ತಂಡದಿಂದ ತೊಗಲುಗೊಂಬೆ ಪ್ರದರ್ಶನ ಮತ್ತು ಪಶ್ಚಿಮ ಬಂಗಾಳದಿಂದ ಆಗಮಿಸಿದ್ದ ಯುವ ಕಲಾವಿದೆಯರಿಂದ ಪರಿಸರ ಜಾಗೃತಿಯ ನವ್ಯಶೈಲಿಯ ಗೊಂಬೆ ಪ್ರದರ್ಶನ ಮತ್ತು ಮೈಮ್ ಅಭಿನಯ ಮನ ಸೆಳೆಯಿತು.

# ಜಿಂಬಾಬ್ವೆ ವಿರುದ್ಧ ಸರಣಿ ಗೆದ್ದ ಭಾರತ

• ಪ್ರಜೋದಯ ವರದಿ

**ಹರಾರೆ:** ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧ ಟಿ20 ಸರಣಿ ಸೋಲಿನ ಕಹಿ ಬಳಿಕ ಇದೀಗ ಭಾರತ ಆತಿಥೇಯ ಜಿಂಬಾಬ್ವೆ ವಿರುದ್ಧದ ಟಿ20 ಸರಣಿಯನ್ನು 2-0 ಅಂತರದಿಂದ ಗೆದ್ದು ಬೀಗಿದೆ.

ನಾಯಕನಾಗಿ ಶ್ರೇಯಸ್ ಅಯ್ಯರ್ ಅವರಿಗೆ ಇದು ಮಹತ್ವದ ಮತ್ತು ಭರವಸೆಯ ಸರಣಿ ಗೆಲುವು. ಇದಕ್ಕೂ ಮೊದಲು, ಅವರ ನಾಯಕತ್ವದಲ್ಲಿ ಭಾರತ ತಂಡವು ಐರ್ಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸಗಳಲ್ಲಿ ಸೋಲುಗಳನ್ನು ಅನುಭವಿಸಿತ್ತು. ಇದು ಅವರ ನಾಯಕತ್ವದ ಸಾಮರ್ಥ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿತು.

ಆದಾಗ್ಯೂ, ಜಿಂಬಾಬ್ವೆ ವಿರುದ್ಧದ ಈ ಟಿ20 ಸರಣಿಯಲ್ಲಿ, ಅವರು ಒತ್ತಡದಿಂದ ಮುಕ್ತರಾಗುವುದಲ್ಲದೆ, ತಮ್ಮ ಕಾರ್ಯತಂತ್ರ ಮತ್ತು ತಂಡದ ಸಂಯೋಜನೆಯ ಮೂಲಕ ಮೊದಲ ಸರಣಿ ಗೆಲುವನ್ನು ಸಾಧಿಸಿದರು. ಈ ಗೆಲುವು ಅವರ ಕ್ಷೀಣಿಸುತ್ತಿರುವ ಪ್ರದರ್ಶನವನ್ನು ಪುನಃಸ್ಥಾಪಿಸಲು ಮತ್ತು ನಾಯಕನಾಗಿ ಅವರ ಆತ್ಮವಿಶ್ವಾಸವನ್ನು ಪುನಃಸ್ಥಾಪಿಸಲು ಸಹಾಯ ಮಾಡುತ್ತದೆ.

ಭಾರತ ನಿಗದಿಪಡಿಸಿದ 220 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿದ ಜಿಂಬಾಬ್ವೆ 17.5 ಓವರ್‌ಗಳಲ್ಲಿ 129 ರನ್‌ಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು. ಭಾರತ ಪರ ಅಭಿಷೇಕ್ ಶರ್ಮಾ ಮೂರು ವಿಕೆಟ್‌ಗಳನ್ನು ಪಡೆದರೆ, ಪ್ರಿನ್ಸ್ ಯಾದವ್ ಮತ್ತು ಯಶ್ ಠಾಕೂರ್ ತಲಾ ಎರಡು ವಿಕೆಟ್‌ಗಳನ್ನು ಪಡೆದರು. ಜಿಂಬಾಬ್ವೆ ಕಳಪೆ ಆರಂಭವನ್ನು ಹೊಂದಿತ್ತು. ಎರಡನೇ ಟಿ20ಐನಲ್ಲಿ ಭಾರತ ಜಿಂಬಾಬ್ವೆಯನ್ನು 90 ರನ್‌ಗಳಿಂದ ಸೋಲಿಸಿ ಮೂರು ಪಂದ್ಯಗಳ ಸರಣಿಯಲ್ಲಿ 2-0 ಮುನ್ನಡೆ ಸಾಧಿಸಿತು.

# ಉತ್ತಮ ಗುರಿಯೊಂದಿಗೆ ಬದುಕು ರೂಪಿಸಿಕೊಳ್ಳಿ

## ವಿದ್ಯಾರ್ಥಿಗಳಿಗೆ ಡಾ|| ಸಂತೋಷ್ ಕರೆ | ಡ್ರಗ್ಸ್ ವಿರುದ್ಧ ಜಾಗೃತಿ



• ಪ್ರಜೋದಯ ವರದಿ

**ಸಕಲೇಶಪುರ:** ವಿದ್ಯಾರ್ಥಿ ಜೀವನ ಅಮೂಲ್ಯವಾಗಿದ್ದು, ಉತ್ತಮ ಗುರಿ ಮತ್ತು ಮೌಲ್ಯಗಳೊಂದಿಗೆ ಬದುಕನ್ನು ರೂಪಿಸಿಕೊಂಡರೆ ಉಜ್ವಲ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯ ಎಂದು ಮನೋವೈದ್ಯ ಡಾ|| ಸಂತೋಷ್ ಹೇಳಿದರು.

ರೋಟರಿ ಕ್ಲಬ್ ಸಕಲೇಶಪುರ, ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನ ಹಾಗೂ ವಿವಿಧ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಪಟ್ಟಣದ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಡ್ರಗ್ಸ್ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಡ್ರಗ್ಸ್ ವ್ಯಸನಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಮಾನಸಿಕ ಸಮಸ್ಯೆಗಳನ್ನು ನಿರ್ಲಕ್ಷಿಸದೆ ತಜ್ಞ ವೈದ್ಯರ ಸಲಹೆ ಪಡೆಯುವುದು ಅಗತ್ಯ ಎಂದು ತಿಳಿಸಿದರು.

ನಗರ ಠಾಣೆಯ ವೃತ್ತ ನಿರೀಕ್ಷಕ ವನರಾಜು ಮಾತನಾಡಿ, ಡ್ರಗ್ಸ್ ಸೇವನೆಯಿಂದ ವ್ಯಕ್ತಿಯ ವಿವೇಚನಾ ಶಕ್ತಿ ಕುಂಠಿತಗೊಂಡು ಅಪರಾಧ ಚಟುವಟಿಕೆಗಳಲ್ಲಿ ತೊಡಗುವ ಸಾಧ್ಯತೆ ಹೆಚ್ಚುತ್ತದೆ. ತಮ್ಮ ಸುತ್ತಮುತ್ತ ಡ್ರಗ್ಸ್ ಮಾರಾಟ ಅಥವಾ ಸಾಗಾಟ ನಡೆಯುತ್ತಿರುವ ಮಾಹಿತಿ ದೊರೆತರೆ ಪೊಲೀಸ್ ಇಲಾಖೆಗೆ ದೂರವಾಣಿ ಮೂಲಕ ಅಥವಾ ಕಾಲೇಜುಗಳಲ್ಲಿ ಇರಿಸಿರುವ ದೂರು ಪೆಟ್ಟಿಗೆಗಳ ಮೂಲಕ ಮಾಹಿತಿ ನೀಡುವಂತೆ ವಿದ್ಯಾರ್ಥಿಗಳಿಗೆ ಮನವಿ ಮಾಡಿದರು.

ಸಮಾಜವನ್ನು ಡ್ರಗ್ಸ್ ಮುಕ್ತಗೊಳಿಸಲು ಪೋಷಕರು ಮತ್ತು ವಿದ್ಯಾರ್ಥಿಗಳಷ್ಟೇ ಅಲ್ಲದೆ, ಮನೆಯ ಸದಸ್ಯರು ಹಾಗೂ ಸಮಾಜದ ಪ್ರತಿಯೊಬ್ಬರೂ ಈ ಬಗ್ಗೆ ಚಿಂತಿಸಿ ಜಾಗೃತರಾಗಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ದಯಾನಂದ್, ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಪ್ರಮುಖ ಮಲ್ನಾಡ್ ಮೆಹಬೂಬ್, ಕಾಲೇಜಿನ ಪ್ರಾಂಶುಪಾಲ ರಮೇಶ್, ರೊ. ಸುರೇಶ್, ವೀರೇಂದ್ರ ಕುಮಾರ್, ವಿಜಿತ್, ತಾಲೂಕು ಪಂಚಾಯಿತಿ ಸಹಾಯಕ ಅಧೀಕ್ಷಕ ಆದಿತ್ಯ, ಉಪನ್ಯಾಸಕರು, ವಿದ್ಯಾರ್ಥಿನಿಯರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕಾವೇರಿ: ಚರ್ಚೆಯಲ್ಲಿ ಭಾಗವಹಿಸದಂತೆ ಒತ್ತಾಯ

## ತಮಿಳುನಾಡು ಸಿ.ಎಂ.ಗೆ ರೈತರ ಆಗ್ರಹ | ಆ.3ಕ್ಕೆ ನಿಗದಿಯಾಗಿರುವ ಸಭೆ

• ಪ್ರಜೋದಯ ವರದಿ



**ಚೆನ್ನೈ:** ಕಾವೇರಿ ನೀರು ಹಂಚಿಕೆ ಕುರಿತಂತೆ ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಆ.3ರಂದು ನಡೆಯಲಿರುವ ಮಾತುಕತೆಯನ್ನು ರದ್ದುಪಡಿಸಲು ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರಿಗೆ ಅಲ್ಲಿನ ರೈತರು ಒತ್ತಾಯಿಸಿದ್ದಾರೆ.

ಕಳೆದ 16 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಕಾವೇರಿ ನೀರು ಹಂಚಿಕೆ ಕುರಿತು ಮಾತುಕತೆಗೆ ಮುಂದಾಗಿದ್ದಾರೆ. 2012ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಜಗದೀಶ್ ಶೆಟ್ಟರ್ ಮತ್ತು ತಮಿಳುನಾಡು ಮುಖ್ಯಮಂತ್ರಿಯಾಗಿದ್ದ ಜಯಲಲಿತಾ ಅವರು ಈ ಕುರಿತು ಸಭೆ ನಡೆಸಿದ್ದರು. ಆದರೆ, 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಈ ಕುರಿತು ಮಾತುಕತೆಗೆ ಉಭಯ ರಾಜ್ಯಗಳು ಮುಂದಾಗಿಲ್ಲ. ಮೇಕೆದಾಟು ಯೋಜನೆ ಸಂಬಂಧ ಚರ್ಚಿಸಲು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್‌ಗೆ ಕರ್ನಾಟಕ ನೀಡಿದ್ದ ಅಧಿಕೃತ ಆಹ್ವಾನ ತಲುಪಿದೆ, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಶೀಘ್ರವೇ ಅವರು ಬೆಂಗಳೂರಿಗೆ ತೆರಳಲಿದ್ದಾರೆಂದು ತಮಿಳುನಾಡು ಕೃಷಿ ಸಚಿವ ಆರ್.ವಿನೋದ್ ಅವರು ಹೇಳಿದ್ದರು.

ಆದರೆ, ತಮಿಳುನಾಡನ್ನು ಕಾವೇರಿ ನೀರು ಪ್ರವೇಶಿಸುವ ಮುನ್ನವೇ ನದಿಗೆ ಹೊಸ ಅಣೆಕಟ್ಟು ನಿರ್ಮಿಸುವುದರಿಂದ ನೀರಾವರಿಗಾಗಿ ನದಿಯನ್ನು ಅವಲಂಬಿಸಿರುವ ತಮ್ಮ ರಾಜ್ಯದ ರೈತರಿಗೆ ಹಾನಿಯಾಗುತ್ತದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ವಿಜಯ್ ಅವರು ಆ.3ರಂದು ನಡೆಯಲಿರುವ ಮಾತುಕತೆಯನ್ನು ರದ್ದುಪಡಿಸುವ ಮೂಲಕ ಕಾನೂನುಬದ್ಧ ಮಾರ್ಗಗಳ ಮೂಲಕ ನದಿ ನೀರಿನ ಹಂಚಿಕೆಗೆ ಸಂಬಂಧಿಸಿದ ರಾಜ್ಯದ ಹಕ್ಕುಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಯೋಜನೆಯ ಕಾಮಗಾರಿಯನ್ನು ಕಾನೂನುಬಾಹಿರವಾಗಿ ಮುಂದುವರಿಸುತ್ತಿದ್ದಾರೆ. ಸುಪ್ರೀಂ ಕೋರ್ಟ್‌ನ ಆದೇಶಗಳಿಗೆ ವಿರುದ್ಧವಾಗಿರುವ ಮಾತುಕತೆಯ ಬೇಡಿಕೆಗಳನ್ನು ಮುಖ್ಯಮಂತ್ರಿ ವಿಜಯ್ ಅವರು ತಿರಸ್ಕರಿಸಬೇಕೆಂದು ತಮಿಳುನಾಡು ಕಾವೇರಿ ರೈತರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಆರ್.ಪಾಂಡಿಯನ್ ಅವರು ಹೇಳಿದ್ದಾರೆ.

ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲು ಅನುಮತಿ ನೀಡುವುದು ಅಥವಾ ನಿರಾಕರಿಸುವುದು ಹಾಗು ನೀರು ಹಂಚಿಕೆಯ ಕುರಿತು ನಿರ್ಧಾರ ಕೈಗೊಳ್ಳಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮಾತ್ರವೇ ಅಧಿಕೃತ ಸಂಸ್ಥೆಯಾಗಿದೆ. ಅದರ ಅನುಮತಿಯಿಲ್ಲದೆ, ಕಾವೇರಿ ನದಿಯಲ್ಲಿ ಯಾವುದೇ ಅಣೆಕಟ್ಟು ನಿರ್ಮಾಣದ ಕುರಿತು ಯಾವುದೇ ರಾಜ್ಯವು ಚರ್ಚಿಸುವಂತಿಲ್ಲ ಎಂದು ಹೇಳಿದ್ದಾರೆ.

ಮೇಕೆದಾಟು ಅಣೆಕಟ್ಟು ವಿಷಯದ ಕುರಿತು ಕರ್ನಾಟಕದೊಂದಿಗೆ ಮಾತುಕತೆ ನಡೆಸಲು ತಮಿಳುನಾಡು ಸರ್ಕಾರ ಒಪ್ಪಿಕೊಂಡಿರುವುದು ಆಘಾತಕಾರಿ ಮತ್ತು ಖಂಡನೀಯ. ಈ ಸಭೆಯನ್ನು ಯಾರು ಆಯೋಜಿಸುತ್ತಿದ್ದಾರೆ. ಕೇಂದ್ರ ಸರ್ಕಾರವೋ ಅಥವಾ ಕರ್ನಾಟಕ ಸರ್ಕಾರವೋ? ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವುದು ತಮಿಳುನಾಡು ಮತ್ತು ಕರ್ನಾಟಕದ ನಡುವಿನ ಸಮಸ್ಯೆಯಲ್ಲ. ಇದು ಕೇವಲ ಕರ್ನಾಟಕದ ಬೇಡಿಕೆಯಾಗಿದೆ. ಈ ವಿಷಯದ ಕುರಿತು ಮಾತುಕತೆ ನಡೆಸುವ ಅಗತ್ಯವಿಲ್ಲ ಎಂದು ಪಿಎಂಕೆ ಅಧ್ಯಕ್ಷ ಅನ್ಬುಮಣಿ ರಾಮದಾಸ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಧರ್ಮೇಂದ್ರ ಪ್ರಧಾನ್ ರಾಜೀನಾಮೆ



» ಮೊದಲನೇ ಪುಟದಿಂದ

ವಿದ್ಯಾರ್ಥಿಗಳ ಕುಟುಂಬಗಳಿಗೆ 1 ಕೋಟಿ ರೂ. ಪರಿಹಾರ ನೀಡಬೇಕೆಂದು ನಾವು ಆಗ್ರಹಿಸಿದ್ದೇವು. ನಿಯಮಗಳು ಮತ್ತು ಕಾಯ್ದೆಗಳಿಗೆ ಒಳಪಟ್ಟು ಆ ಕುಟುಂಬಗಳಿಗೆ ಗೌರವಪೂರ್ವಕ ಪರಿಹಾರವನ್ನು ಒದಗಿಸುವುದಾಗಿ ಸರ್ಕಾರ ಒಪ್ಪಿಕೊಂಡಿದೆ. ಅದರ ಜೊತೆಗೆ, ವ್ಯಾಪಕ ಶಿಕ್ಷಣ ಮತ್ತು ಪರೀಕ್ಷಾ ಸುಧಾರಣೆ ಗಳನ್ನು ಒಳಗೊಂಡ 5 ಅಂಶಗಳ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ ಎಂದರು.

ಅಶುತೋಷ್ ರಾಂಕಾ ಅವರು ಮಾತನಾಡಿ, ನಮ್ಮ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಂಡಿದೆ. ನಮ್ಮ ಮುಂದಿನ ತಂತ್ರ ಅಥವಾ ಇತರ ವಿಷಯಗಳ ಕುರಿತು ನಿಮಗೆ ಮುಂದೆ ತಿಳಿಸುತ್ತೇವೆ. ಪ್ರತಿಭಟನಾನಿರತರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯುವುದಾಗಿ ಸರ್ಕಾರ ಭರವಸೆ ನೀಡಿದೆ ಎಂದರು.

**ಬೇಡಿಕೆ ಈಡೇರಿಕೆಗೆ ಸರ್ಕಾರ ಒಪ್ಪಿಗೆ :** ಪರೀಕ್ಷಾ ವ್ಯವಸ್ಥೆಯಲ್ಲಿನ ಸುಧಾರಣೆಗಳು ಮತ್ತು ಪ್ರತಿಭಟನೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ನಡೆದ ಮಾತುಕತೆಯ ವೇಳೆ ಕಾಕ್ರೋಚ್ ಜನತಾ ಪಾರ್ಟಿಯ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವು ಒಪ್ಪಿಕೊಂಡಿದೆ ಎಂದು ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ತಿಳಿಸಿದ್ದಾರೆ.

ಪರೀಕ್ಷಾ ಸುಧಾರಣೆಗಳ ಕುರಿತು ಸಿಜೆಪಿ ಸಲ್ಲಿಸಿರುವ 5 ಅಂಶಗಳ ಬೇಡಿಕೆಗಳ ಚಾರ್ಟರ್ ಅನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಲಿದ್ದು, ಮಾತುಕತೆಯ ನಂತರ ಅಗತ್ಯ ಕ್ರಮ ಕೈಗೊಳ್ಳಲಿದೆ. ಪ್ರತಿಭಟನೆ ಸಮಯದಲ್ಲಿ ದಾಖಲಾದ ಪ್ರಕರಣಗಳ ಕುರಿತು ಚರ್ಚಿಸಲಾಗಿದೆ. ಪ್ರತಿಭಟನಾಕಾರರಿಗೆ ಎಫ್‌ಐಆರ್‌ಗಳ ಪ್ರತಿಯನ್ನು ಒದಗಿಸಲಾಗುವುದು. ಅವರ ವಿರುದ್ಧ ಯಾವುದೇ ಸೇಡು ತೀರಿಸಿಕೊಳ್ಳುವ ಕ್ರಮ ಕೈಗೊಳ್ಳುವುದಿಲ್ಲವೆಂದು ಭರವಸೆ ನೀಡಿದರು.

# ಬರ ಪರಿಸ್ಥಿತಿ: ಕೇಂದ್ರದ ಬಳಿ ಸರ್ವಪಕ್ಷ ನಿಯೋಗ

» ಮೊದಲನೇ ಪುಟದಿಂದ

ಅಧಿವೇಶನ ಮುಂದೂಡುವ ಪರಿಸ್ಥಿತಿ ಎದುರಾಯಿತು. ಇನ್ನಷ್ಟು ಮುಂದೂಡಿಕೆ ಕಷ್ಟವಾಗಬಹುದೆಂದು ತಿಳಿಸಿದರು.

ಈ ವಾರ ಮಳೆ ಇಲ್ಲದಿರಬಹುದು. ಆದರೆ ಪ್ರಕೃತಿ ಕಣ್ಣು ಬಿಟ್ಟು ಮುಂದಿನ ದಿನಗಳಲ್ಲಿ ಮಳೆ ಬಂದರೆ ಆಗ ಯಾವುದೇ ತೊಂದರೆ ಆಗಬಾರದು. ಪ್ರತಿ ಕ್ಷೇತ್ರದ ಬಿತ್ತನೆ ಬೀಜ, ಗೊಬ್ಬರ ದಾಸ್ತಾನು ಬಗ್ಗೆ ಸ್ಥಳೀಯ ಶಾಸಕರಿಗೆ ಮಾಹಿತಿ ನೀಡಬೇಕು. ಏಕೆಂದರೆ ರೈತರು ಶಾಸಕರ ಮೇಲೆ ಗೊಬ್ಬರ, ಬಿತ್ತನೆ ಬೀಜಗಳಿಗೆ ಒತ್ತಡ ಹೇರುತ್ತಾ ಇರುತ್ತಾರೆ. ಅದರ ಬಗ್ಗೆ ಅವರಿಗೂ ಮಾಹಿತಿ ಇರಲೇಬೇಕು. ನಗರ ಪ್ರದೇಶದ ಶಾಸಕರು ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆ ಅಲ್ಲಿ ಗಮನ ಹರಿಸಲು ಸೂಚಿಸಿದ್ದು, ಅದಕ್ಕಾಗಿ ಜಿಲ್ಲಾಧಿಕಾರಿಗಳ ಬಳಿ ಹಣ ಇದೆ. ಅಗತ್ಯವಿದ್ದರೆ ಇನ್ನಷ್ಟು ಹಣ ನೀಡಲು ಸಿದ್ಧವಿದ್ದೇವೆಂದು ಸೂಚಿಸಿದರು.

**ಹೊಸ ಬೋರ್‌ವೆಲ್‌ಗೆ ಜಿಪಿಎಸ್ ಕಡ್ಡಾಯ**

ಹೊಸ ಬೋರ್‌ವೆಲ್ ಕೊರೆಯುವ ಮುಂಚಿನ ಹಾಗು ನಂತರದ ವಿಡಿಯೋ, ಫೋಟೋ ಗಳನ್ನು ದಾಖಲಿಸಬೇಕು. ಜಿಪಿಎಸ್ ಕೂಡ ನಮೂದಿಸಬೇಕು. ಬೋರ್‌ವೆಲ್ ಆಳದ ಬಗ್ಗೆಯೂ ದಾಖಲಿಸಬೇಕು. 150 ಅಡಿ ಆಳ ಕೊರೆದು 500–600 ಅಡಿ ಆಳ ಕೊರೆಯಲಾಗಿದೆ ಎಂದು ಅಕ್ರಮಕ್ಕೆ ಆಸ್ಪದ ನೀಡಬಾರದು. ಹೊಸದಾಗಿ ಬೋರ್ ವೆಲ್ ಕೊರೆದರೆ, ದುರಸ್ತಿಗೊಳಿಸಿದರೆ ಪ್ರತಿಯೊಂದರ ಮಾಹಿತಿ ದಾಖಲಿಸಬೇಕು. ಹೊಸ ಬೋರ್‌ವೆಲ್ ಕೊರೆದರೆ ಜಿಪಿಎಸ್ ಮಾಹಿತಿ ದಾಖಲಿಸಬೇಕು. ವಿದ್ಯುತ್ ಸಂಪರ್ಕ ಸೇರಿದಂತೆ ಪ್ರತಿ ತೀರ್ಮಾನದ ಬಗ್ಗೆಯೂ ಮಾಹಿತಿಗಳು ಪಾರದರ್ಶಕವಾಗಿರಬೇಕು ಎಂದರು.



## ಇಂದು ಚ.ರಾ.ಪಟ್ಟಣದಲ್ಲಿ ಪತ್ರಿಕಾ ದಿನಾಚರಣೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಜು.26ರ ಭಾನುವಾರ ಪಟ್ಟಣ ಹೊರವಲಯದ ಬೆಲಸಿಂದ ಶ್ರೀವನದಲ್ಲಿ ತಾಲ್ಲೂಕು ಮಟ್ಟದ ಪತ್ರಿಕಾ ದಿನಾಚರಣೆ ಆಯೋಜಿಸ ಲಾಗಿದೆ ಎಂದು ಸಂಘದ ತಾಲ್ಲೂಕು ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ ಅವರು ಹೇಳಿದರು.

ಶನಿವಾರ ಮಾತನಾಡಿದ ಅವರು, ವರ್ಷಕ್ಕೊಮ್ಮೆ ಪತ್ರಕರ್ತರ ಕುಟುಂಬವು ಒಂದೇ ವೇದಿಕೆಯಲ್ಲಿ ಪಾಲ್ಗೊಳ್ಳುವುದು ಪತ್ರಿಕಾ ದಿನಾಚರಣೆಯ ವಿಶೇಷವೆಂದರು. ಬೆಳಿಗ್ಗೆ 9.30 ರಿಂದ ಸಂಜೆ 5.30ರ ವರೆಗೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮ ಉದ್ಘಾಟನೆ, ಪತ್ರಕರ್ತರು ಹಾಗು ವಿತರಕರಿಗೆ ಸನ್ಮಾನ, ಎಸ್‌ಎಸ್‌ಎಲ್‌ಸಿ ಹಾಗು ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ ಉತ್ತಮ ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಪತ್ರಕರ್ತರ ಕುಟುಂಬದ ಸದಸ್ಯರಿಗೆ ಕ್ರೀಡಾಕೂಟ ಆಯೋಜಿಸಲಾಗಿದ್ದು ವಿಜೇತರಿಗೆ ಬಹುಮಾನ ವಿತರಿಸಲಾಗುವುದೆಂದು ತಿಳಿಸಿದರು.

ದಿನ ಪತ್ರಿಕೆಗಳ ಪ್ರದರ್ಶನ, ಕುಂಚ ಕಲಾವಿದರಿಂದ ಚಿತ್ರ ಬಿಡಿಸುವ ವಿಶೇಷ ಕಾರ್ಯಕ್ರಮ, ಬೋಟಿಂಗ್ ವ್ಯವಸ್ಥೆ ಮಾಡಲಾಗಿದೆ. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿ.ಎನ್.ಬಾಲಕೃಷ್ಣ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಸೇರಿ ಇತರ ಗಣ್ಯರು ಭಾಗವಹಿಸಲಿದ್ದಾರೆಂದರು. ಪತ್ರಕರ್ತರಾದ ಸಿದ್ದರಾಜು, ಎ.ನಟೇಶ್, ಎ.ಎಲ್.ನಾಗೇಶ್, ಶಾಮಸುಂದರ್ ಕೆ.ಅಣ್ಣೇನಹಳ್ಳಿ, ಗೋವಿಂದ, ನಾಗೇಂದ್ರರಾಯ, ಪಾಂಡುರಂಗ ಇತರರಿದ್ದರು.

# ಗಣೇಶ ಉತ್ಸವ ರಜತ ಮಹೋತ್ಸವಕ್ಕೆ ಸಕಲ ಸಿದ್ಧತೆ


• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಭಕ್ತಿ, ಶ್ರದ್ಧೆ ಹಾಗು ಸಾಮಾಜಿಕ ಕಾರ್ಯಚಟುವಟಿಕೆಗಳಿಗೆ ಚನ್ನರಾಯಪಟ್ಟಣ ಪ್ರಸನ್ನ ಗಣಪತಿ ಸೇವಾ ಸಮಿತಿ ಹೆಸರುವಾಸಿಯಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಶ್ರೀ ಪ್ರಸನ್ನ ಗಣಪತಿ ಆಸ್ಥಾನ ಮಂಟಪದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ 75ನೇ ವರ್ಷದ ಗಣೇ ಶೋತ್ಸವ ಹಿನ್ನಲೆಯಲ್ಲಿ ಗಣೇಶಮೂರ್ತಿ ತಯಾರಿಕೆಯ ಮಣ್ಣಿನ ಪೂಜೆಯನ್ನು ಶನಿವಾರ ನೆರವೇರಿಸಿ ಮಾತನಾಡಿದರು.

ಪಟ್ಟಣದ ಗಣಪತಿ ಸೇವಾ ಸಮಿತಿಗೆ ರಾಜ್ಯದಲ್ಲೇ ವಿಶೇಷ ಸ್ಥಾನಮಾನವಿದೆ. ಜಾತ್ಯತೀತವಾಗಿ ಗಣೇಶ ಹಬ್ಬವನ್ನು ಆಚರಣೆ ಮಾಡಿಕೊಂಡು ಸರ್ವಧರ್ಮಗಳು ಒಂದೇ ಎಂಬ ಭಾವೈಕ್ಯತೆ ಸಾರಲಾಗುತ್ತಿದೆ. ಸತತ 74 ವರ್ಷಗಳಿಂದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ಕೊಂಡು ಬಂದಿರುವ ಸೇವಾ ಸಮಿತಿಯು 75ನೇ ವರ್ಷದ ಮಹೋತ್ಸವಕ್ಕಾಗಿ ಏಕಾದಶಿ ಶುಭದಿನದಂದು ಮಣ್ಣಿನ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

50 ದಿನ ಗಣೇಶ ಮೂರ್ತಿಯನ್ನು



ಇಟ್ಟು ಪೂಜೆ ಪುನಸ್ಕಾರಗಳನ್ನು ಕೈಗೊಂಡು ನಿತ್ಯ ಅನ್ನ ದಾಸೋಹ ಸೇರಿ ನಾಡು, ನುಡಿ, ಕಲೆ, ಸಾಹಿತಿ, ಸಂಸ್ಕೃತಿಗೆ ಹತ್ತಿರವಾದ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುತ್ತಿದೆ. ತಾಲ್ಲೂಕು ಪಂಚಾಯಿತಿ ಸದಸ್ಯನಾದಾಗಿನಿಂದಲೂ ಪ್ರತಿ ವರ್ಷ ನೆರವೇರುವ ಗಣೇಶ ಮೂರ್ತಿ ಪ್ರತಿಷ್ಠಾನ ಕಾರ್ಯಕ್ಕೆ ತನು, ಮನ, ಧನ ಸಹಕಾರ ನೀಡುತ್ತಿದ್ದು, ಇದು ಈ ಬಾರಿಯೂ ಮುಂದುವರೆಯುತ್ತದೆಂದರು.

ಪ್ರಸನ್ನ ಗಣಪತಿ ಆಸ್ಥಾನ ಮಠದ ಛಾವಣಿಯ ದುರಸ್ತಿಗೆ ಪುರಸಭೆ ವತಿಯಿಂದ ಆರ್ಥಿಕ ನೆರವು ಒದಗಿಸಿ ದುರಸ್ತಿ ಕಾರ್ಯ ಪೂರ್ಣಗೊಂಡಿದೆ. ಮುಂಗಾರು ಮಳೆ ಕೈ ಕೊಟ್ಟ ಹಿನ್ನಲೆಯಲ್ಲಿ ತಾಲ್ಲೂಕಿನಲ್ಲಿ ತೀವ್ರ ಮಳೆಯ ಕೊರತೆ ಉಂಟಾಗಿ ಬರಗಾಲದ ಪರಿಸ್ಥಿತಿ ಎದುರಾಗಿದೆ. ರೈತರು ಸಂಕಷ್ಟದಲ್ಲಿದ್ದು ಗಣಪತಿ ಕೃಪೆ ಯಿಂದ ಉತ್ತಮ ಮಳೆಯಾಗಿ ಬೆಳೆ ಉತ್ತಮವಾಗಿರಲಿ–ನಾಡು ಸುಭಿಕ್ಷವಾಗಿರಲಿ ಎಂದು ಪ್ರಾರ್ಥಿಸಿದರು.

ಗಣಪತಿ ಸೇವಾ ಸಮಿತಿ ಅಧ್ಯಕ್ಷ ಸಿ.ಎನ್.ಅಶೋಕ್ ಅವರು ಮಾತನಾಡಿ, ಕಳೆದ ಸಾಲಿನಂತೆ ಈ ಬಾರಿ 48 ದಿನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು. ಪ್ರತಿದಿನ ಅನ್ನ ಸಂತರ್ಪಣೆ, ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಯೊಂದಿಗೆ ಕಾರ್ಯಕ್ರಮವನ್ನು ರೂಪಿಸುವ ಸಂಕಲ್ಪ ಮಾಡಲಾಗಿದೆ. ರಜತ ಮಹೋತ್ಸವ ಹಿನ್ನಲೆಯಲ್ಲಿ ಅದ್ದೂರಿ ಕಾರ್ಯಕ್ರಮವನ್ನು ನಡೆಸಲು ಆಲೋಚಿಸಿರುವುದರಿಂದಪಟ್ಟಣದ ಸಂಘ–ಸಂಸ್ಥೆಗಳು ಸಹಕಾರ ನೀಡಿ ಯಶಸ್ಸಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

**10 ಲ.ರೂ. ದೇಣಿಗೆ**

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ಮಾತನಾಡಿ, ಪಟ್ಟಣದ ಗಣಪತಿ ಸೇವಾ ಸಮಿತಿ ಪಕ್ಷಾತೀತ, ಜಾತ್ಯಾತೀತವಾಗಿ ಗಣೇಶೋತ್ಸವ ಆಚರಿಸುತ್ತಿದ್ದು ರಜತ ಮಹೋತ್ಸವಕ್ಕೆ ವೈಯಕ್ತಿಕವಾಗಿ 10 ಲ.ರೂ. ದೇಣಿಗೆ ನೀಡುವುದಾಗಿ ತಿಳಿಸಿದರು.

ತಾಲ್ಲೂಕು ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್ ಮಾತನಾಡಿದರು, ಗುಲಸಿಂದ ಶ್ರೀ ರಾಘವೇಂದ್ರ ಮಠದ ಧರ್ಮದರ್ಶಿ ರಾಧಾಕೃಷ್ಣ, ಸುಲೋಚನ ರಾಧಾಕೃಷ್ಣ, ಗಿರೀಶ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್, ಪುರಸಭಾ ಮಾಜಿ ಅಧ್ಯಕ್ಷ ಸಿ.ಎನ್.ಮೋಹನ್, ಬನಶಂಕರಿ ರಘು, ಸದಸ್ಯರಾದ ಎಸ್.ಎ.ಗಣೇಶ್, ಪ್ರಸನ್ನ ಗಣಪತಿ ಸೇವಾ ಸಮಿತಿಯ ಗೌರವಾಧ್ಯಕ್ಷ ಸಿ.ಕೆ.ಕೃಷ್ಣ, ಸದಸ್ಯರಾದ ಮನೋಹರ್, ಸತ್ಯನಾರಾಯಣ, ನಂಜುಂಡಮ್ಮೈಮ್, ಮಹದೇವ್, ಮುಖಂಡರಾದ ಮಂಜಣ್ಣ, ಗಂಗಾಧರ್, ಉಮೇಶ್, ಕಲಾವಿದ ರವೀಂದ್ರ, ಗಣೇಶ ಮೂರ್ತಿ ತಯಾರಕ ಪ್ರಸನ್ನ ಇದ್ದರು.

## ಬಸ್ ನಿಲ್ಲಿಸುವ ವಿಚಾರಕ್ಕೆ ಚಾಲಕರ ನಡುವೆ ಗಲಾಟೆ



**ಹಾಸನ:** ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ಲಾಟ್ ಫಾರಂನಲ್ಲಿ ಬಸ್ ನಿಲ್ಲಿಸುವ ವಿಚಾರಕ್ಕೆ ಇಬ್ಬರು ಸಾರಿಗೆ ಬಸ್ ಚಾಲಕರ ನಡುವೆ ಶುರುವಾದ ವಾಗ್ವಾದ ಗಲಾಟೆ ಆಂತಕ್ಕೆ ತಿರುಗಿದೆ.

ಚಾಲಕನ ಮೇಲೆ ಮತ್ತೊಬ್ಬ ಚಾಲಕ ಹಲ್ಲೆ ಮಾಡಿದ್ದಾರೆ. ಚಂದನ್ ಹಲ್ಲೆಗೊಳಗಾದ ಸಾರಿಗೆ ಬಸ್ ಚಾಲಕನಾಗಿದ್ದು, ಹೇಮಂತ್ ಕುಮಾರ್ ಹಲ್ಲೆ ನಡೆಸಿದ ಕೆಎಸ್‌ಆರ್‌ಟಿಸಿ ಬಸ್ ಚಾಲಕ. ಕನಕಪುರ ಡಿಪೋಗೆ ಸೇರಿದ ಕೆಎ–42–ಎಫ್ 2308 ಸಂಖ್ಯೆಯ ಸಾರಿಗೆ ಬಸ್, ಮಂಗಳೂರು ಡಿಪೋಗೆ ಸೇರಿದ ಕೆಎ–09–ಎಫ್–5249 ಸಂಖ್ಯೆಯ 2 ಸಾರಿಗೆ ಬಸ್‌ಗಳು ಧರ್ಮಸ್ಥಳಕ್ಕೆ ತೆರಳುತ್ತಿದ್ದವು. ಫ್ಲಾಟ್ ಫಾರಂನಲ್ಲಿ ಬಸ್ ನಿಲ್ಲಿಸಿ ಮೊದಲು ಹೊರಡುವ ವಿಚಾರಕ್ಕೆ ಇಬ್ಬರ ನಡುವೆ ಜಗಳ ಶುರುವಾಗಿ ಚಂದನ್ ಮೇಲೆ ಹೇಮಂತ್‌ಕುಮಾರ್ ಹಲ್ಲೆ ನಡೆಸಿದ್ದಾರೆ.

ಈ ವೇಳೆ ಮೇಲಾಧಿಕಾರಿಗಳು ಮಧ್ಯ ಪ್ರವೇಶಿಸಿ ಇಬ್ಬರ ನಡುವೆ ಸಂಧಾನ ನಡೆಸಿ ಕಳುಹಿಸಿದ್ದಾರೆ. ಬಸ್ ನಿಲ್ದಾಣದಿಂದ ಕನಕಪುರ ಡಿಪೋದ ಬಸ್ ಧರ್ಮಸ್ಥಳಕ್ಕೆ ತೆರಳಲು ಹೊರಗೆ ಬರುತ್ತಿದ್ದಂತೆ ಕಾರಿನಲ್ಲಿ ಬಂದ ಚಂದನ್ ಕಡೆಯವರು ಎನ್ನಲಾದ ಕೆಲವು ಯುವಕರು ಬಸ್ ಅಡ್ಡಗಟ್ಟಿ ಚಾಲಕನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದ್ದಾರೆ. ಅದರಿಂದಾಗಿ ಕೆಲಕಾಲ ಟ್ರಾಫಿಕ್ ಜಾಮ್ ಉಂಟಾಗಿದ್ದು ವಾಹನ ಸವಾರರು ಪರದಾಡುವಂತಾಗಿತ್ತು. ಇದುವರೆಗೂ ಯಾವುದೇ ದೂರು ದಾಖಲಾಗಿಲ್ಲ.

## ಶೆಲ್ಟರ್ ಬೀಗ ಮುರಿದು ನಗದು ಕಳವು

• ಪ್ರಜೋದಯ ವರದಿ

**ಬೇಲೂರು:** ವಾಹನ ಚಾಲನಾ ತರಬೇತಿ ಶಾಲೆಯ ಶೆಲ್ಟರ್ ಬೀಗ ಮುರಿದು 8 ಸಾವಿರ ರೂ. ಕದ್ದಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಇಲ್ಲಿನ ಪದ್ಮನಾಭ ಕಾಂಪ್ಲೆಕ್ಸ್‌ನಲ್ಲಿ ಎಸ್.ಪಿ.ಚೇತನ್ ಅವರು ಗೋಕುಲ್ ಡ್ರೈವಿಂಗ್ ಸ್ಕೂಲ್ ನಡೆಸುತ್ತಿದ್ದಾರೆ. ಜು.23ರ ರಾತ್ರಿ ಶೆಲ್ಟರ್‌ಗೆ ಬೀಗ ಹಾಕಿಕೊಂಡು ಹೋಗಿದ್ದರು. ಮಾರನೇ ದಿನ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಶೆಲ್ಟರ್ ಬೀಗ ಒಡೆದಿರುವ ಕಳ್ಳರು ಡ್ರಾಯರ್ ಲಾಕರ್ ಒಡೆದು 8 ಸಾವಿರ ರೂ. ಕದ್ದಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟ್ರ್ಯಾಕ್ಟರ್ ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಬೇಲೂರು:** ಸೌದೆ ತುಂಬುತ್ತಿದ್ದಾಗ ಚಾಲಕನ ನಿರ್ಲಕ್ಷ್ಯದಿಂದ ಟ್ರ್ಯಾಕ್ಟರ್ ಡಿಕ್ಕಿಯಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೆಳ್ಳಾವರ ಗ್ರಾಮದಲ್ಲಿ ನಡೆದಿದೆ.

ಕಡೇಗರ್ಜೆ ಗ್ರಾಮದ ಕೆ.ಹೆಚ್.ಹೇಮರಾಜು (50) ಮೃತರು. ಟಿಂಬರ್ ವ್ಯಾಪಾರ ಮಾಡಿ ಕೊಂಡಿದ್ದ ಹೇಮರಾಜು ಶುಕ್ರವಾರ ಗ್ರಾಮದ ಮಹೇಂದ್ರ ಹಾಗು ಮಲಸಾವರದ ತೇಜಕುಮಾರ್ ಅವರೊಂದಿಗೆ ಸೌದೆ ತುಂಬಿಕೊಂಡು ಬರಲು ಬೆಳ್ಳಾವರಕ್ಕೆ ತೆರಳಿದ್ದರು. ಚಾಲಕ ತೇಜಕುಮಾರ್ ಎಂಬುವವರ ನಿರ್ಲಕ್ಷ್ಯದ ಚಾಲನೆಯಿಂದ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದೊಡ್ಡಪುರ ಶಾಲೆಯಲ್ಲಿಂದು ಗುರುವಂದನೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ದೊಡ್ಡಪುರದ ಸರ್ಕಾರಿ ಪ್ರೌಢಶಾಲೆಯ 2000–2001ನೇ ಶೈಕ್ಷಣಿಕ ಸಾಲಿನ ಹಳೆಯ ವಿದ್ಯಾರ್ಥಿಗಳ ಸಂಘವು ಗುರುವಂದನಾ–2026 ಕಾರ್ಯಕ್ರಮವನ್ನು ಜು. 26ರ ಭಾನುವಾರ ಆಯೋಜಿಸಿದೆ.

ಶಾಲಾ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ಸಮಾರಂಭ ಆರಂಭವಾಗಲಿದೆ. 2000–2001ರ ಅವಧಿಯ ಲ್ಲಿದ್ದ ಎಲ್ಲಾ ಶಿಕ್ಷಕರನ್ನೂ ಸನ್ಮಾನಿಸಿ, ಗುರುವಂದನೆ ಸಲ್ಲಿಸಲಾಗುತ್ತದೆ. ಶಾಲೆಯ ಅಭಿವೃದ್ಧಿ ಸಲುವಾಗಿ ಹಳೆಯ ವಿದ್ಯಾರ್ಥಿಗಳು ನೀಡಬಹುದಾದ ಕೊಡುಗೆಗಳ ಕುರಿತು ಚರ್ಚೆ ನಡೆಯಲಿದೆ. ಮಾಹಿತಿಗೆ 81055 44040 (ರಮೇಶ್) ಇಲ್ಲಿಗೆ ಸಂಪರ್ಕಿಸಬಹುದು.

### ಅಹೋರಾತ್ರಿ ಪ್ರತಿಭಟನಾ ಸಮಾವೇಶದಲ್ಲಿ ಬಾನು ಮುಷ್ತಾಕ್ ಅಭಿಮತ

# ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳು ರಾಷ್ಟ್ರ ವಿರೋಧವಲ್ಲ

• ಪ್ರಜೋದಯ ವರದಿ

**ಹಾಸನ:** ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳು ರಾಷ್ಟ್ರವಿರೋಧವಲ್ಲ, ಅದು ಪ್ರಜಾಪ್ರಭುತ್ವದ ಜೀವಂತಿಕೆಯ ಸಂಕೇತ. ಚಳುವಳಿಯೆಂದರೆ ಸರ್ಕಾರವನ್ನು ಉರುಳಿಸುವ ಪ್ರಯತ್ನವಲ್ಲ, ಆಡಳಿತದ ಗಮನಕ್ಕೆ ಜನರ ನೋವು, ಅಸಮಾಧಾನ ಮತ್ತು ಬೇಡಿಕೆಗಳನ್ನು ತರುವ ಸಂವಿಧಾನಬದ್ಧ ಮಾರ್ಗ ಎಂದು ಸಾಹಿತಿ ಬಾನು ಮುಷ್ತಾಕ್ ಅವರು ತಿಳಿಸಿದರು.



ನಗರದ ಅಂಬೇಡ್ಕರ್ ಪ್ರತಿಮೆ ಎದುರು ವಿದ್ಯಾರ್ಥಿಗಳ ಹೋರಾಟ ಬೆಂಬಲಿಸಿ ಸಾಂಸ್ಕೃತಿಕ ಪ್ರತಿರೋಧ ಅಹೋರಾತ್ರಿ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ಸತ್ಯಾಗ್ರಹವೆಂದರೆ ಹಿಂಸೆಯ ವಿರುದ್ಧ ಸತ್ಯ ಮತ್ತು ಅಹಿಂಸೆಯ ಶಕ್ತಿಯಿಂದ ಅಧಿಕಾರವನ್ನು ಆತ್ಮಾವಲೋಕನಕ್ಕೆ ಒತ್ತಾಯಿಸುವ ನೈತಿಕ ಹೋರಾಟ. ಪ್ರತಿಭಟನಾಕಾರರಿಗೆ ತುಕ್ಡೆ ಗ್ಯಾಂಗ್, ರಾಷ್ಟ್ರ ವಿರೋಧಿ, ದೇಶದ್ರೋಹಿ, ಖಾಲಿಸ್ತಾನಿ, ಜಿಹಾದಿ ಎಂಬಂತಹ ಲೇಬಲ್‌ಗಳನ್ನು ಅಂಟಿಸುವ ಪ್ರವೃತ್ತಿ ಪ್ರಜಾಪ್ರಭುತ್ವಕ್ಕೆ ಶೋಭೆಯಲ್ಲ ಎಂದರು.

ಯುವಜನರ ಧ್ವನಿಯನ್ನು ದಮನಿಸುವುದರಿಂದ ಅಸಮಾಧಾನ ಮಾಯವಾಗುವುದಿಲ್ಲ, ಅದು ಇನ್ನಷ್ಟು ಆಳವಾಗುತ್ತದೆ. ಪ್ರಜಾಪ್ರಭುತ್ವದ ಶಕ್ತಿಯು ಲಾಠಿ, ಅಶ್ರುವಾಯು ಅಥವಾ ಅಪಪ್ರಚಾರದಿಂದಲ್ಲ, ಭಿನ್ನಾಭಿಪ್ರಾಯವನ್ನು ಗೌರವದಿಂದ ಆಲಿಸಿ ಅದರೊಂದಿಗೆ ಸಂವಾದ ನಡೆಸುವ ಪ್ರಬುದ್ಧತೆಯಲ್ಲಿದೆ. ಪ್ರಶ್ನೆಗಳನ್ನು ಎತ್ತುವುದು ದೇಶವಿರೋಧವಲ್ಲ, ಅದು ಉತ್ತಮ ಭಾರತವನ್ನು ಕಟ್ಟುವ ಜವಾಬ್ದಾರಿ ಎಂದು ಹೇಳಿದರು.

ನಮ್ಮ ಹೋರಾಟ ಕೇವಲ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ವಿರುದ್ಧವಲ್ಲ, ನಮ್ಮ ಹೋರಾಟ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ. ನೀಟ್ ಜಾರಿಯಾದ ನಂತರ ಅತೀ ದೊಡ್ಡ ಲಾಭ ಪಡೆದಿರುವುದು ಖಾಸಗಿ ಕೋಚಿಂಗ್ ಉದ್ಯಮ. ಇಂದು ಖಾಸಗಿ ಕೋಚಿಂಗ್ ಉದ್ಯಮವು 80,000 ಕೋಟಿಯಿಂದ 1 ಲಕ್ಷ ಕೋಟಿ ಉದ್ಯಮವಾಗಿ ಬೆಳೆಯುತ್ತಿದೆ. ಇಂದು ಸುಮಾರು 23 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆಯುತ್ತಿದ್ದಾರೆ. ಆದರೆ ದೇಶದಾದ್ಯಂತ ಎಂಬಿಬಿಎಸ್ ಸೀಟುಗಳು ಸುಮಾರು 1.36 ಲಕ್ಷ ಮಾತ್ರ. ಅದರಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸುಮಾರು 63 ಸಾವಿರ ಸೀಟುಗಳಿದ್ದು, ಉಳಿದವು ಖಾಸಗಿ ಕಾಲೇಜುಗಳಲ್ಲಿವೆ. ಹಣವಿಲ್ಲದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಇನ್ನೂ ದೂರದಕನಸಾಗಿಯೇ ಉಳಿದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಹೋರಾಟ ಯಾವುದೇ ಒಬ್ಬ ವ್ಯಕ್ತಿಯ ವಿರುದ್ಧವಲ್ಲ, ಅದು ನ್ಯಾಯ, ಪಾರದರ್ಶಕತೆ ಮತ್ತು ಸಮಾನ ಅವಕಾಶಗಳ ಪರವಾಗಿರಬೇಕು. ನಿಮ್ಮ ಧ್ವನಿ ಸಂವಿಧಾನದ ಮೌಲ್ಯಗಳನ್ನು ಬಲಪಡಿಸುವಂತಿರಲಿ. ನಿಮ್ಮ ಕೋಪವನ್ನು ಸೃಜನಶೀಲ ಶಕ್ತಿಯನ್ನಾಗಿ ಪರಿ ವರ್ತಿಸಿ. ನಿಮ್ಮ ಪ್ರತಿಭಟನೆ ಶಾಂತಿಯುತವಾ ಗಿದ್ದರೆ ಅದರ ನೈತಿಕ ಬಲ ಇನ್ನಷ್ಟು ಹೆಚ್ಚಾಗುತ್ತದೆ. ಭಾರತದ ಸಂವಿಧಾನದ ಪ್ರಸ್ತಾವನೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಎಂಬ ನಾಲ್ಕು ಮೌಲ್ಯಗಳನ್ನು ನಮಗೆ ನೀಡಿದೆ. ಈ 4 ಮೌಲ್ಯಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಸರ್ಕಾರಕ್ಕಿರುವಷ್ಟೇ ನಾಗರಿಕರಿಗೂ ಇದೆ ಎಂದರು.

ಸೋನಂ ವಾಂಗ್ಚುಕ್ ಆಗಲಿ, ಅಭಿಜಿತ್ ದಿಪ್ಕೆ ಆಗಲಿ ಅವರು ಈ ಹೋರಾಟದ ನಿಮಿತ್ತ ಮಾತ್ರ. ನಿಜವಾದ ಶಕ್ತಿ ವ್ಯಕ್ತಿಗಳಲ್ಲ, ಜನರಲ್ಲಿದೆ. ಇಂದು ಭಾರತದಾದ್ಯಂತ ವ್ಯಾಪಿಸಿರುವ ಲಕ್ಷಾಂತರ ವಿದ್ಯಾರ್ಥಿಗಳ ನೋವು, ಆತಂಕ ಮತ್ತು ಭವಿಷ್ಯದ ಕುರಿತ ಕಳವಳವೇ ಈ ಸತ್ಯಾಗ್ರಹದ ಜೀವಾಳವಾಗಿದೆ ಎಂದರು.

ಮುಖಂಡರಾದ ಧರ್ಮೇಶ್, ನವೀನ್ ಕುಮಾರ್, ಪೃಥ್ವಿ, ವಿಜಯ್ ಕುಮಾರ್, ಹೆಚ್.ಕೆ.ಸಂದೇಶ್ ಸೇರಿ ಮತ್ತಿತರರು ಹಾಜರಿದ್ದರು.

**ನೀಟ್ ವ್ಯವಸ್ಥೆ ಮರುಪರಿಶೀಲನೆಯಾಗಲಿ**

ನೀಟ್ ವ್ಯವಸ್ಥೆಯ ಸಮಗ್ರ ಮರುಪರಿಶೀಲನೆ ನಡೆಯಬೇಕು. ಶಿಕ್ಷಣವನ್ನು ವ್ಯಾಪಾರವಾಗಿಸಿರುವ ಕೋಚಿಂಗ್ ಮಾಫಿಯಾದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ತರಬೇಕು. ದೇಶಾ ದ್ಯಂತ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆಯನ್ನು ಹಾಗು ಸೀಟುಗಳನ್ನು ಗಣನೀಯ ವಾಗಿ ಹೆಚ್ಚಿಸಬೇಕು. ವೈದ್ಯಕೀಯ ಶಿಕ್ಷಣವು ಹಣವಿರುವವರ ಹಕ್ಕಾಗದೆ, ಪ್ರತಿಭೆ ಮತ್ತು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಎಲ್ಲರಿಗೂ ಲಭ್ಯವಾಗಬೇಕು. ಶಿಕ್ಷಣವನ್ನು ಮಾರುಕಟ್ಟೆಯ ವಸ್ತುವಾಗಿಸದೆ ಸಂವಿಧಾನ ನೀಡಿರುವ ಸಮಾನ ಅವಕಾಶದ ಹಕ್ಕಾಗಿ ರಕ್ಷಿಸಬೇಕೆಂದು ಪ್ರತಿಭಟನೆಯಲ್ಲಿ ಒತ್ತಾಯಿಸಲಾಯಿತು.

## ಜು.29ರಂದು ಸಾಯಿ ಸಿದ್ಧಾಶ್ರಮದಲ್ಲಿ ಗುರು ಪೂರ್ಣಿಮೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಚಿಕ್ಕೋನಹಳ್ಳಿ ಗೇಟ್ ಬಳಿಯಿರುವ ಶ್ರೀ ಸಾಯಿ ಸಿದ್ಧಾಶ್ರಮದಲ್ಲಿ ಜು.29 ರಂದು ಗುರು ಪೂರ್ಣಿಮೆ ಏರ್ಪಡಿಸಲಾಗಿದೆ ಎಂದು ಆಶ್ರಮದ ಶ್ರೀ ಗುರುಮೂರ್ತಿ ಗುರೂಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಜು.29ರ ಬುಧವಾರ ಬೆಳಿಗ್ಗೆ 8.30ಕ್ಕೆ ವ್ಯಾಸ ಪೂಜೆ, 8.45ಕ್ಕೆ ಸದ್ಗುರು ಪೂಜೆ, 9 ಗಂಟೆಗೆ ಗಂಗಾಪೂಜೆ, ರಿಕ್ಷಾ ವಂದನೆ ಮತ್ತು ಆಶೀರ್ವಚನ, ಕುಂಭಾಭಿಷೇಕ ಗಣಪತಿ ಹೋಮ, ಶಿರಡಿ ದೇವಾಲಯದ ಮಾದರಿಯಲ್ಲೇ ನಾಲ್ಕು ಆರತಿ ಮತ್ತು ಸಾಯಿಬಾಬಾ ಅವರ ಪಾದಸ್ಪರ್ಶ ಮತ್ತು ಭಜನೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಅಂದು ಬೆಳಿಗ್ಗೆಯಿಂದ ಸಂಜೆವರೆಗೆ ಶ್ರೀ ಸಾಯಿಬಾಬಾ ಅವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ದರ್ಶನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಮಧ್ಯಾಹ್ನ ಪ್ರಸಾದ ವಿನಿಯೋಗದ ವ್ಯವಸ್ಥೆ ಇದೆ ಎಂದು ತಿಳಿಸಿದರು.

ಆಶ್ರಮದಲ್ಲಿ ಕಲ್ಯಾಣ ಮಂಟಪ ನಿರ್ಮಾಣ ಹಂತದಲ್ಲಿದ್ದು ಸಾಯಿ ಆಶ್ರಮದ ನೆರವಿನ ಜೊತೆಗೆ ಸರ್ಕಾರೇತರ ಸಂಸ್ಥೆಗಳು ಮತ್ತು ದಾನಿಗಳ ಸಹಕಾರ ಪಡೆಯಲಾಗುವುದೆಂದರು.

ಚಿತ್ರ ದುರ್ಗದಲ್ಲಿ ನಿರ್ಮಾಣ ಮಾಡಲಾಗು ತ್ತಿರುವ ಸದ್ಗುರು ಸಾಯಿ ಮಂದಿರದ ಕಾಮಗಾರಿ ಕೊನೆ ಹಂತದಲ್ಲಿದ್ದು, ಶೀಘ್ರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಹಿರೀಸಾವೆಯ ಆಶ್ರಮದ ಕಲ್ಯಾಣ ಮಂಟಪವನ್ನು ಹೆಚ್ಚಿನ ಅಭಿವೃದ್ಧಿ ಯೊಂದಿಗೆ ಮುಂದಿನ ವರ್ಷಾಂತ್ಯ ದಲ್ಲಿ ಉದ್ಘಾಟನೆ ಮಾಡಲಾಗು ವುದೆಂದು ಹೇಳಿದರು.

## ಕಾಡಾನೆ ದಾಳಿಗೆ ಕರು ಬಲಿ



**ಸಕಲೇಶಪುರ:** ಕಾಡಾನೆ ದಾಳಿಯಿಂದ ಕರು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಿರುವಾಲೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಯತೀಶ್ ಅವರಿಗೆ ಸೇರಿದ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಕರುವಿನ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಕರು ಸ್ಥಳದಲ್ಲೇ ಸಾವನ್ನಪ್ಪಿದೆ. ಘಟನೆಯಿಂದ ರೈತ ಆತಂಕಕ್ಕೊಳಗಾಗಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ವಲಯ ಅರಣ್ಯಾಧಿಕಾರಿ ಹೇಮಂತ್ ಹಾಗು ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಶಶಿಕುಮಾರ್ ಉಪಸ್ಥಿತರಿದ್ದು, ರೈತನಿಗೆ ಧೈರ್ಯ ತುಂಬಿದರು. ಪರಿಶೀಲನೆ ಬಳಿಕ ನಿಯಮಾನುಸಾರ ಸೂಕ್ತ ಪರಿಹಾರ ಧನ ಮಂಜೂರು ಮಾಡುವ ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಭರವಸೆ ನೀಡಿದರು.

ಸಕಲೇಶಪುರ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿರುವ ಹಿನ್ನಲೆ, ವನ್ಯಜೀವಿಗಳ ಓಡಾಟ ಹೆಚ್ಚಿರುವ ಪ್ರದೇಶಗಳ ರೈತರು ಹಾಗು ಸಾರ್ವಜನಿಕರು ಎಚ್ಚರಿಕೆ ವಹಿಸಬೇಕೆಂದು ಅರಣ್ಯ ಇಲಾಖೆ ಮನವಿ ಮಾಡಿದೆ. ಮಾನವವನ್ಯಜೀವಿ ಸಂಘರ್ಷ ತಡೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಮತ್ತಷ್ಟು ಬಲಪಡಿಸಲಾಗುವುದೆಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪೋಕ್ಸೋ ಕಾಯ್ದೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಅಗತ್ಯ

• ಪ್ರಜೋದಯ ವರದಿ

**ಬೇಲೂರು:** ಮಕ್ಕಳ ವಿರುದ್ಧದ ಅಪರಾಧ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗಿ ವರದಿಯಾಗುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಕ್ಸೋ) ಕುರಿತು ಕಾನೂನು ಅರಿವು ಮತ್ತು ಜಾಗೃತಿ ಮೂಡಿಸುವುದು ಅತ್ಯಗತ್ಯವೆಂದು ಕಾನೂನು ಸೇವಾ ಸಮಿತಿಯ ಅಭಿರಕ್ಷಕಿ ಶಶಿಕಲಾ ಅವರು ಹೇಳಿದರು.



ಪಟ್ಟಣದ ಜೂನಿಯರ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಉಚಿತ ಕಾನೂನು ಅರಿವು–ನೆರವು ಹಾಗೂ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತು ಮಾಹಿತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಕ್ಕಳು ಮತ್ತು ವಿದ್ಯಾರ್ಥಿಗಳು ತಮ್ಮ ಹಕ್ಕುಗಳು ಹಾಗೂ ಕಾನೂ ನುಗಳ ಬಗ್ಗೆ ಕನಿಷ್ಠ ಅರಿವು ಹೊಂದಿರುವುದು ಇಂದಿನ ಅಗತ್ಯವಾಗಿದೆ. ಶಾಲಾ–ಕಾಲೇಜು ಹಂತದ ಲ್ಲಿಯೇ ಕಾನೂನಿನ ಮೂಲಭೂತ ಮಾಹಿತಿಯನ್ನು ನೀಡುವುದರಿಂದ ಅನೇಕ ರೀತಿಯ ಅಪ ರಾಧಗಳು ಹಾಗೂ ಅವಘಡಗಳನ್ನು ಮುನ್ನೆಚ್ಚರಿಕೆಯಿಂದ ತಡೆಯಲು ಸಾಧ್ಯವಾಗುತ್ತದೆ. ಯಾವುದೇ ರೀತಿಯ ಕಾನೂನು ಸಮಸ್ಯೆ ಎದುರಾದರೂ ಭಯಪಡದೆ ಸೂಕ್ತ ಕಾನೂನು ನೆರವು ಪಡೆಯಬೇಕು ಎಂದು ಸಲಹೆ ನೀಡಿದರು.

ಜನತಾ ನ್ಯಾಯಾಲಯದ ಮೂಲಕ ಸಾರ್ವಜನಿಕರಿಗೆ ತ್ವರಿತವಾಗಿ, ಸುಲಭವಾಗಿ ಹಾಗೂ ಕಡಿಮೆ ವೆಚ್ಚದಲ್ಲಿ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕಾನೂನು ಸೇವಾ ಪ್ರಾಧಿಕಾರ ಕಾರ್ಯನಿರ್ವಹಿಸುತ್ತಿದೆ. ಕಾನೂನು ಅರಿವು ಪ್ರತಿಯೊಬ್ಬ ನಾಗರಿಕನಿಗೂ ತಲುಪಬೇಕು. ವಿಶೇಷವಾಗಿ ವಿದ್ಯಾರ್ಥಿಗಳು ತಮ್ಮ ಹಕ್ಕುಗಳು, ಕರ್ತವ್ಯಗಳು ಹಾಗೂ ಕಾನೂನು ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ ಎಂದು ಹೇಳಿದರು.

ಕ್ಷೇತ್ರ ಸಮನ್ವಯ ಅಧಿಕಾರಿ ಶಿವಮರಿಯಪ್ಪ ಮಾತನಾಡಿ, ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಅಭಿಯಾನದ ಪ್ರಮುಖ ಉದ್ದೇಶ ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸುವುದು ಹಾಗೂ ಅನರ್ಹರ ಹೆಸರುಗಳನ್ನು ಕೈಬಿಡುವುದಾಗಿದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಜಾತಿ, ಧರ್ಮ ಅಥವಾ ವರ್ಗದ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಪರಿಗಣಿಸಿ ಕಾರ್ಯ ನಿರ್ವಹಿಸಲಾಗುವುದು ಎಂದು ತಿಳಿಸಿದರು.

ಜೂನಿಯರ್ ಕಾಲೇಜು ಪ್ರಾಂಶುಪಾಲ ಕೆ.ಹರೀಶ್ ಅವರು ಮಾತನಾಡಿ, ಪ್ರತಿಯೊಬ್ಬರೂ ಕಾನೂನಿನ ಬಗ್ಗೆ ಕನಿಷ್ಠ ತಿಳುವಳಿಕೆ ಹೊಂದುವುದು ಇಂದಿನ ಅಗತ್ಯವಾಗಿದೆ. ಕಾನೂನು ಸೇವಾ ಪ್ರಾಧಿಕಾರ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು ಮೂಡಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಎಸ್‌ಐಆರ್ ಪ್ರಕ್ರಿಯೆಯು ಪ್ರಜಾಪ್ರಭುತ್ವದ ಬುನಾದಿಯನ್ನು ಮತ್ತಷ್ಟು ಗಟ್ಟಿಗೊಳಿಸುವ ಮಹತ್ವದ ಕಾರ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು ಹಾಗೂ ನೈತಿಕ ಸ್ಥೈರ್ಯ ಬೆಳೆಸಲು ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ ಎಂದು ಹೇಳಿದರು.

ತಾಲ್ಲೂಕು ಕಚೇರಿ ಚುನಾವಣಾ ಶಿರಸ್ತೇದಾರ ದೇವರಾಜ್, ಜೂನಿಯರ್ ಕಾಲೇಜಿನ ಸಂಸ್ಕೃತ ಉಪನ್ಯಾಸಕ ಲಕ್ಷ್ಮೀನಾರಾಯಣ, ನ್ಯಾಯಾಲಯದ ಗುಮಾಸ್ತ ಗಿರಿಯಪ್ಪ ಇನ್ನಿತರರು ಉಪಸ್ಥಿತರಿದ್ದರು.




**ಹಾಸನ: ನಗರದ ಬಿ.ಕಾಟಿಹಳ್ಳಿಯ ಹೆಲ್ತ್ ಲೇಔಟ್‌ನಲ್ಲಿರುವ ಸ್ವಾಮಿ ವಿವೇಕಾನಂದ ಉದ್ಯಾನವನದಲ್ಲಿ ಶನಿವಾರ ಸೆಂಟ್ರಲ್ ಕಾಮರ್ಸ್ ಕಾಲೇಜು ವಿದ್ಯಾರ್ಥಿಗಳು ಹಾಗು ಸ್ವಾಮಿ ವಿವೇಕಾನಂದ ಕ್ಷೇಮಾಭಿವೃದ್ಧಿ ಸಂಘದಿಂದ ನೂರಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು. ಕಾಲೇಜಿನ ಸಿಬ್ಬಂದಿ ಹಾಗು ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಿದ್ದರು.**

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019